ಸಂಪುಟ: 23 | ಸಂಚಿಕೆ: 05 | ಮಂಡ್ಯ | ಏಪ್ರಿಲ್ 2026 | ಪುಟಗಳು: 20

# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ

Reg. No.: KARKAN/2013/52928
Post No.: KA/SK/MND/978/2020-2022

## ಅನಂತ ಚೇತನ



- ಪರೀಕ್ಷೆ ಫಲಿತಾಂಶ
- The Hindu Philosophy
- ಪ್ರಯತ್ನದ ಫಲ
- ಬದುಕು ಎಂದರೇನು?
- ಮಮತೆಯ ಸ್ಪರ್ಶ
- ಮರದ ಬೆಲೆ
- ನಾರದರ ಸಂಸಾರ





ಶಾಲಾವಾರ್ಷಿಕೋತ್ಸವ ಕಾರ್ಯಕ್ರಮ, ಅಭಿನವ ಭಾರತಿ ವಿದ್ಯಾ ಕೇಂದ್ರ, ಪ್ರಾಥಮಿಕ ಶಾಲೆ, ಮಂಡ್ಯ





ಅಭಿನವ ಭಾರತಿ ವಿದ್ಯಾ ಕೇಂದ್ರ, ಪ್ರಾಥಮಿಕ ಶಾಲೆ, ಮಂಡ್ಯ





ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆ, ಕಾಳೇನಹಳ್ಳಿ

# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ- ಶೈಕ್ಷಣಿಕ-ಮಾಸ ಪತ್ರಿಕೆ

**ಸಂಪುಟ: 23 । ಸಂಚಿಕೆ: 05**

**ಮಂಡ್ಯ । ಏಪ್ರಿಲ್ 2026 । ಪುಟಗಳು: 20**

ಪ್ರಕಾಶಕರು ಮತ್ತು ಸಂಪಾದಕರು :

ಶಿವಮೂರ್ತಿ ಕೀಲಾರ

ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್

ಮುದ್ರಕರು :

ಸಿ. ಪ್ರಸನ್ನ, ಸಿರಿ ಡಿಜಿಟಲ್ ಪ್ರಿಂಟರ್ಸ್, ಮಂಡ್ಯ

**ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು**

ವಿಳಾಸ : ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್,
ಅಭಿನವ ಭಾರತಿ ವಿದ್ಯಾಕೇಂದ್ರ,
ಡಿ ಸಿ ಆಫೀಸ್ ಹಿಂಭಾಗ, ಮಂಡ್ಯ


## -: ಪ ರಿ ವಿ ಡಿ :-


| ಲೇಖನಗಳು | ಪುಟಸಂಖ್ಯೆ |
|---|---|
| 1. ಮನಸ್ಸೇ ತಣ್ಣಗಿರು | 4 |
| 2. ಪ್ರಾಯಶ್ಚಿತ್ತ | 5 |
| 3. The Hindu Philosophy | 7 |
| 4. ಪರೀಕ್ಷೆ ಫಲಿತಾಂಶ | 8 |
| 5. ಪ್ರಯತ್ನದ ಫಲ | 9 |
| 6. ಬದುಕು ಎಂದರೇನು? | 10 |
| 7. ಮರದ ಬೆಲೆ | 11 |
| 8. ಬಾಂಧ್ಯವ ಬುತ್ತಿ ನಮ್ಮ ನೆಲದ ಗತ್ತು | 12 |
| 9. ಏನ ಬೇಡಲಿ ನಿನ್ನ ಬಳಿ ಬಂದು। ಸ್ಮಶಾನದಲ್ಲಿ ನಿಂದು! | 13 |
| 10. ಮಮತೆಯ ಸ್ಪರ್ಶ | 14 |
| 11. ಅಭಿನವ ಸರಿಗಮಪ ಅನಂತ ಸಂಗೀತ ಯಾನ-2026 | 16 |
| 12. ನಾರದರ ಸಂಸಾರ | 18 |


# ಸಂಪಾದಕೀಯ

ಮಾನವ ಜೀವನವು ದೈವದತ್ತವಾದ ಅಮೂಲ್ಯ ಅವಕಾಶ. ಪ್ರಾಯಶ್ಚಿತ್ತ, ಪ್ರಯತ್ನದ ಫಲವೇ ಬದುಕು ಎಂಬ ಮಾತು ಜೀವನದ ಸತ್ಯವನ್ನು ಸಾರುತ್ತದೆ. ನಾವು ಮಾಡುವ ಪ್ರತಿಯೊಂದು ಶ್ರಮ, ಪ್ರತಿಯೊಂದು ಒಳ್ಳೆಯ ಪ್ರಯತ್ನವು ನಮ್ಮ ಬದುಕಿನ ರೂಪವನ್ನು ಕಟ್ಟುತ್ತದೆ. ಫಲವು ತಕ್ಷಣ ಸಿಗದಿದ್ದರೂ. ಸತ್ಯವಾದ ಪ್ರಯತ್ನ ಎಂದಿಗೂ ವ್ಯರ್ಥವಾಗುವುದಿಲ್ಲ. ಆಧ್ಯಾತ್ಮಿಕ ದೃಷ್ಟಿಯಲ್ಲಿ ಬದುಕು ಒಂದು ಪರೀಕ್ಷೆಯಾಗಿದೆ. ಈ ಪರೀಕ್ಷೆಯಲ್ಲಿ ಅಂಕಗಳನ್ನು ಕೊಡುವುದು ಶಾಲೆಯ ಶಿಕ್ಷಕರು ಅಲ್ಲ, ನಮ್ಮ ಕರ್ಮಗಳು ಸತ್ಯ, ಧರ್ಮ, ದಯೆ ಮತ್ತು ಪ್ರೀತಿ. ಇವುಗಳೇ ನಮ್ಮ ಫಲಿತಾಂಶವನ್ನು ನಿರ್ಧರಿಸುವ ಅಂಶಗಳು.

ಪುರಾಣಗಳಲ್ಲಿ ನಾರದ ಮುನಿಯ ಕಥೆ ನಮಗೆ ಮಹತ್ವದ ಪಾಠವನ್ನು ಕಲಿಸುತ್ತದೆ. ಸಂಸಾರದ ಬಾಂಧ್ಯವ ಅರ್ಥ ತಿಳಿಸಲು ದೇವರು ಒಂದು ಅನುಭವದ ಮೂಲಕ ಪರೀಕ್ಷೆ ನೀಡಿದರು ಎಂಬುದು ಪ್ರಸಿದ್ಧ. ಸಂಸಾರವೆಂದರೆ ಕೇವಲ ಬಂಧನವಲ್ಲ. ಅದು ಮಮತೆ, ಜವಾಬ್ದಾರಿ ಮತ್ತು ಪ್ರೀತಿಯ ಸಂಕೇತ.

ನಮ್ಮ ಜೀವನದಲ್ಲಿಯೂ ನಾವು ಅನೇಕ ಪರೀಕ್ಷೆಗಳನ್ನು ಎದುರಿಸುತ್ತೇವೆ. ಕೆಲವೊಮ್ಮೆ ವಿಫಲತೆಗಳು ಬರುತ್ತವೆ. ಆದರೆ ಅವು ಅಂತಿಮ ಫಲಿತಾಂಶವಲ್ಲ. ಅವು ನಮ್ಮನ್ನು ರೂಪಿಸುವ ಹಂತಗಳು. ತಾಯಿಯ ಮಮತೆಯಂತೆ ನಮ್ಮ ಪ್ರಯತ್ನಗಳು ಮನಗೆ ದಾರಿದೀಪವಾಗಬೇಕು.

ಇಂದಿನ ಯುಗದಲ್ಲಿ ಸ್ಪರ್ಧೆ ಮತ್ತು ಆತುರದ ನಡುವೆ ನಾವು ಜೀವನದ ನಿಜವಾದ ಅರ್ಥವನ್ನು ಮರೆತುಬಿಡುತ್ತಿದ್ದೇವೆ. ಬದುಕು ಎಂದರೆ ಕೇವಲ ಯಶಸ್ಸು ಗಳಿಸುವುದಲ್ಲ. ಅದು ಒಳ್ಳೆಯತನವನ್ನು ಉಳಿಸಿಕೊಂಡು. ಸಂಬಂಧಗಳನ್ನು ಕಾಪಾಡಿಕೊಂಡು ಮನುಷ್ಯತ್ವವನ್ನು ಉಳಿಸುವುದು.

ವೈಕುಂಠ ವಾರ್ತಾ ಪತ್ರಿಕೆ ತನ್ನ ಓದುಗರಿಗೆ ಈ ಮೌಲ್ಯಗಳನ್ನು ನೆನಪಿಸಲು ಬದ್ಧವಾಗಿದೆ. ನಮ್ಮ ಬದುಕಿನ ಪ್ರತಿಯೊಂದು ಕ್ಷಣವೂ ಒಂದು ಪಾಠ. ಪ್ರತಿಯೊಂದು ಪ್ರಯತ್ನವೂ ಒಂದು ಸಾಧನೆ ಮತ್ತು ಪ್ರತಿಯೊಂದು ಅನುಭವವೂ ನಮ್ಮ ಆತ್ಮವನ್ನು ಮೇಲಕ್ಕೆತ್ತುವ ಹೆಜ್ಜೆಯಾಗಿದೆ.


**ಶ್ರೀ ಶಿವಮೂರ್ತಿ ಕೀಲಾರ**
ಅಧ್ಯಕ್ಷರು,
ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್(ರಿ)
ಪ್ರಧಾನ ಕಾರ್ಯದರ್ಶಿ,
ಅಭಿನವ ಭಾರತಿ ಶಿಕ್ಷಣ ಟ್ರಸ್ಟ್(ರಿ). ಮಂಡ್ಯ




# ಮನಸ್ಸೇ ತಣ್ಣಗಿರು



ನಮ್ಮೆಲ್ಲಾ ವರ್ತನೆಗಳಿಗೆ ನಮ್ಮ ಮನಸ್ಸೇ ಮೂಲ ಕಾರಣ ಹೌದಲ್ವೇ? ಯಾವುದರಲ್ಲೇ ಆಗಿರಲಿ ಅಂದರೆ ಮನೆ ಕಟ್ಟುವುದರಲ್ಲಿ, ಆಸ್ತಿ ಸಂಪಾದಿಸುವುದರಲ್ಲಿ, ಹಣ ಮಾಡುವುದರಲ್ಲಿ, ಹಲವಾರು ಪದವಿ, ಪ್ರಶಸ್ತಿಗಳಿಸುವುದರಲ್ಲಿ ಹೀಗೆ ಯಾವುದೇ ಆಗಿರಲಿ ಅವುಗಳ ಪಡೆಯಲು ಇನ್ನಿಲ್ಲದ ಕಸರತ್ತು ಮಾಡಲು ನಮ್ಮೊಳಗಿನ ಮನಸ್ಸೇ ಕಾರಣ ಅಲ್ವೇ? ಅದು ಯಾವುದೇ ರಂಗವಿರಲಿ, ದೇಶ ದೇಶಗಳ ಹೊಡೆದಾಟಕ್ಕೆ ತಮ್ಮ ದುರ್ಬಲ ಮನಸ್ಸೇ ತಾನೆ ಕಾರಣ? ಇಲ್ಲಿ ಮನುಷ್ಯರ ಕೊಂದರೆ ತಮ್ಮ ಆಸೆ ತೀರುತ್ತೆ. ನಮ್ಮ ಬಗ್ಗೆ ನೆರೆಯ ದೇಶಗಳಿಗೆ ಭಯ ಹುಟ್ಟುತ್ತೆ ಮತ್ತೆ ಶಹಬ್ಬಾಶ್ ಗಿರಿ ಸಿಗುತ್ತೆ ಅನ್ನೋ ಹಪಹಪಿಕೆ ಅಷ್ಟೆ. ಇರು ಹೀಗೆ ಎಲ್ಲರೂ ಜನರ ಕೊಲ್ಲುತ್ತಾ ಬಂದರೆ ಜಗತ್ತಿನಲ್ಲಿ ಮನುಷ್ಯರು ಉಳಿಯಲು ಹೇಗೆ ಸಾಧ್ಯ ಹೇಳಿ? ಇದೆಲ್ಲದಕ್ಕೂ ನಮ್ಮ ಮನಸ್ಸೇ ಪ್ರಮುಖ ಕಾರಣ ಆಗಿರುತ್ತೆ.

ನಾವು ನಮ್ಮ ಬುದ್ದಿಗೆ ಹೆಚ್ಚಿನ ಮಹತ್ವ ಕೊಡ್ತಿದ್ದೀವಿ ಮನಸ್ಸಿಗಲ್ಲ. ನಾವು ಮುಖ್ಯವಾಗಿ ಗಮನಿಸಬೇಕಾದರೆ ಬುದ್ಧಿಯೇ ಬೇರೆ ಮನಸ್ಸೇ ಬೇರೆ ಹಾಗೂ ದೇಹವೇ ಬೇರೆ. ಬುದ್ಧಿ ದುಡುಕಲು ಸದಾ ಮುಂದಿರುತ್ತೆ. ಮನಸ್ಸು ಸದಾ ಶಾಂತದಿಂದ ಚೆನ್ನಾಗಿ ಯೋಚನೆ ಮಾಡಿ ತಿಳಿ ಹೇಳಲು ಬಯಸುತ್ತೆ. ದೇಹ ಎಲ್ಲವನ್ನೂ ಹೊತ್ತು ತಿರುಗುವ ಮಹಾ ಯಂತ್ರ. ತನಗೆ ಎಷ್ಟು ಬೇಕು ಅಷ್ಟನ್ನು ಮಾತ್ರ ಹೊರಲು ಅಥವಾ ಕಾರ್ಯ ನಿರ್ವಹಿಸಲು ಸಿದ್ಧವಿರುತ್ತೆ.

ಎಲ್ಲವೂ ಹೆಚ್ಚಾದರೆ ಅಂಗವೈಕಲ್ಯಕ್ಕೆ ದಾರಿ ಮಾಡುತ್ತದೆ. ಮನಸ್ಸು ಸದಾ ತಣ್ಣಗಿರಲು ಬಯಸುತ್ತದೆ. ಆದರೆ ಬುದ್ಧಿ ಕೇಳ್ಬೇಕಲ್ಲ. ಅದು ಸದಾ ಜಿದ್ದಾ ಜಿದ್ದಿಯಲ್ಲಿ ಮುಳುಗಿಸಲು ಕಾದಿರುತ್ತದೆ. ತಾಳ್ಮೆಯೊಂದು ಮನದಲ್ಲಿರುತ್ತೆ.



ಸಬ್ಬನಹಳ್ಳಿ ಶಶಿಧರ

ಅದನ್ನ ಮರೆತು ತಮ್ಮ ಮಂಕು ಬುದ್ದಿಯನ್ನೇ ಕೇಳಿ ಪ್ರತಿಯೊಬ್ಬರೂ ದುಡುಕುತ್ತಲೇ ಇದ್ದಾರೆ. ಒಳಗೊಂದು ಹೊರಗೊಂದು ಹೇಳುತ್ತಾ ಮನೋರೋಗಿಗಳಾಗಿರುವ ಜೊತೆಗೆ ತೋರ್ಪಡಿಕೆಯ ಜೀವನ ನಡೆಸುತ್ತಿದ್ದಾರೆ.

ಮನಸ್ಸಿನ ಮಹತ್ವ ತಿಳಿದವರು ಈಗಲೂ ಯಾವುದೇ ಆಸೆ ಆಮಿಷಕ್ಕೆ ಒಳಗಾಗಿ ನೆಮ್ಮದಿ ಹಾಳು ಮಾಡಿಕೊಳ್ಳದೆ ತಣ್ಣಗಿದ್ದಾರೆ. ಆದರೆ ಅಂಥವರ ನೋಡಿ ಬುದ್ಧಿವಂತರು ತಮ್ಮ ನಾಲಿಗೆ ಚಪಲ ತೀರಿಸಿಕೊಳ್ಳುತ್ತಿದ್ದಾರೆ. ಮನಸ್ಸುಳ್ಳವರು ಅವೆಲ್ಲವನ್ನೂ ಮನಸ್ಸಿಗೆ ಅಂಟಿಸಿ ಕೊಳ್ಳದೆ ಆರಾಮವಾಗಿ ನಗ್ ನಗ್ತಾ ಜೀವನ ಸಾಗಿಸುತ್ತಿದ್ದಾರೆ.

ಉದಾಹರಣೆಗಳು ನಮ್ಮ ಕಣ್ಣಮುಂದೆ ಸಾಕಷ್ಟಿವೆ. ಪ್ರತಿಯೊಬ್ಬರಿಗೂ ಒಂದಲ್ಲ ಎರಡಲ್ಲಾ ನೂರಾರು ಆಸೆಗಳಿರ್ತವೆ.

ಆದರೆ ಅವುಗಳನ್ನೆಲ್ಲಾ ಪೂರೈಸುವುದಕ್ಕೆ ಸಾಧ್ಯವಿಲ್ಲ. ನಮಗೆ ಎಷ್ಟು ಬರಬೇಕೊ ಅಷ್ಟೇ ಬರೋದು ಎಲ್ಲವೂ ಬೇಕು ಎನ್ನವುದು ಬುದ್ದಿಯ ಕೆಲಸ. ಮನಸ್ಸಿನದು ಆಗಲ್ಲ.

"ನಿನಗೆಷ್ಟು ಬೇಕು ಅಷ್ಟನ್ನು ಮಾತ್ರ ಪಡಿ ದುರಾಸೆ ಹಿಂದೆ ಹೋದರೆ ದುಃಖ ಕಟ್ಟಿಟ್ಟ ಬುತ್ತಿ" ಎಂದು ಹೇಳುತ್ತದೆ.

ಯಾವುದೇ ಕ್ಷೇತ್ರದಲ್ಲಾಗಲಿ ಇದ್ದುದರಲ್ಲಿ ತೃಪ್ತಿ ಪಟ್ಟ ಮನಸ್ಸುಗಳು ತುಂಬಾ ಕಡಿಮೆಯೆ. ಎಲ್ಲಾ ಕಡೆಯು ದುರಾಸೆಯೇ ಹೆಚ್ಚು. ಹಾಗಾಗಿ ಈಗ ಯಾವ ಮುಖದಲ್ಲೂ ಕೂಡ ಸಹಜವಾದ ಬಗೆ ಮಾತು ಪ್ರೀತಿ ಯಾವುವೂ ಇಲ್ಲ ಎಲ್ಲವೂ ತೋರ್ಪಡಿಕೆ.

ಅಂದರೆ ಇನ್ನಷ್ಟು ಮತ್ತಷ್ಟು ಆ ಹುದ್ದೆ, ಮಂತ್ರಿ ಹುದ್ದೆ, ಹೀಗೆ ನಾನಾ ಬಯಕೆಗಳಿಗೆ ದಾಸರಾಗಿ ತಾವು ತಾವೇನು ಎಂಬುದನ್ನೇ ಮರೆತಿದ್ದಾರೆ. ಮನುಷ್ಯನಿಗೆ ಎಲ್ಲವೂಗಳನ್ನೂ ತನ್ನವುಗಳನ್ನಾಗಿ ಮಾಡಿಕೊಳ್ಳುವ ಚಪಲ. ಆದರೆ ಕಾಲ ಬಿಡುವನೆ? ಯಾರಿಗೆ ಎಷ್ಟೆಷ್ಟು ಬೇಕು ಅಷ್ಟು ಕೊಟ್ಟು ಮುಗಿಸುತ್ತಾನೆ.

ಇಂದು ಸರಿ ಸುಮಾರು ಪ್ರತಿಯೊಬ್ಬರಿಗೂ ಮುಖ್ಯಮಂತ್ರಿ ಆಗ್ಬೇಕು, ಪ್ರಧಾನ ಮಂತ್ರಿ ಆಗ್ಬೇಕು ಎಂಬ ಹೆಬ್ಬಯಕೆ. ಇದು ಎಲ್ಲರಿಗೂ ಇದ್ದೇ ಇರುತ್ತದೆ. ಆದರೆ ಕೈಗೂಡ್ಬೇಕಲ್ವ? ಎಲ್ಲಾದರೂ ಆಗುತ್ತ ಹೇಳಿ ಬುದ್ಧಿ ಸದಾ ಹೀಗೆ ಯೋಚನೆ ಮಾಡೋದು.

ಆದರೆ ಮನಸ್ಸು ಮಾತ್ರ ಸದಾ ಪ್ರೀತಿ ಪ್ರಶಾಂತತೆ ಸಹನೆ, ತ್ಯಾಗ, ದಯೆ, ಮಮತೆ ಇಂತಹ ಅಮೂಲ್ಯ ಗುಣಗಳಿಗೆ ಮಣೆ ಹಾಸುತ್ತಿರುತ್ತದೆ.

06ನೇ ಪುಟಕ್ಕೆ...

# ಪ್ರಾಯಶ್ಚಿತ್ತ



ಅಮ್ಮಾ ಏನದು ಅಲ್ಲಿ ಶಬ್ದ?

ಆತ ಒರಟು ಧ್ವನಿಯಲ್ಲಿ ಮತ್ತು ಸಿಟ್ಟಲ್ಲಿ ಅಮ್ಮನತ್ರ ಕೇಳಿದ

ಅಮ್ಮ ನನ್ನ ಕೈ ತಾಗಿ ನಿನ್ನ ಮೊಬೈಲ್ ಫೋನ್ ಕೆಳಕ್ಕೆ ಬಿದ್ದದ್ದು ಪುಟ್ಟಾ.

ಯಾವ ಫೋನ್ ಅಮ್ಮಾ ಅಂತ ಕೇಳುತ್ತಾ ಆತ ಒಳಗಡೆ ಹೋಗಿ ನೋಡುತ್ತಾನೆ.. ಆತನ ಸಿಟ್ಟು ನೆತ್ತಿಗೇರಿತು. ಏನಮ್ಮಾ ನಿಮ್ಮ ಕಣ್ಣು ಕುರುಡಾಗಿದೆಯಾ? ಈ ಮೊಬೈಲ್ ಫೋನಿನ ಬೆಲೆ ಎಷ್ಟು ಅಂತ ಗೊತ್ತಾ ನಿಮಗೆ? ಇಪ್ಪತ್ತನಾಲ್ಕು ಸಾವಿರ ರೂಪಾಯಿಗಳನ್ನು ಕೊಟ್ಟು ಖರೀದಿಸಿ ಒಂದು ತಿಂಗಳು ಕೂಡಾ ಆಗಿಲ್ಲ. ನಿಜವಾಗಿಯೂ ಅಮ್ಮಾ ಇತ್ತೀಚಿನ ದಿನಗಳಿಂದ ನಿಮ್ಮಿಂದ ತುಂಬಾ ನಷ್ಟಗಳನ್ನು ಅನುಭವಿಸುತ್ತಿದ್ದೇನೆ.

ವೀರೇಶ್ ಅರಸಿಕೆರೆ.

ಆತನ ಮಾತುಗಳನ್ನೆಲ್ಲಾ ಕೇಳುತ್ತಾ ಭಯ ಮತ್ತು ಬೇಸರದಲ್ಲಿ ನಡುಗುತ್ತಾ ನಿಂತಿದ್ದಾರೆ ಆ ತಾಯಿ. ಆಕೆ ಮೆಲ್ಲನೆ ಹೇಳುತ್ತಾಳೆ. ಕಂದಾ ನಾನು ಮಾತ್ರೆಗಳನ್ನು ತೆಗೆಯುವಾಗ ಕೈ ತಾಗಿ ಕೆಳಕ್ಕೆ ಬಿದ್ದದ್ದು. ಬೇಕೂಂತ ಕೆಳಕ್ಕೆ ಹಾಕಿದ್ದಲ್ಲ ಪುಟ್ಟಾ ಬಯ್ಯಬೇಡ ನನ್ನ ಮಗುವೇ...

ಆಕೆಯ ಕಣ್ಣುಗಳಿಂದ ಕಣ್ಣೀರು ಸುರಿಯತೊಡಗಿತು....

ಇನ್ನು ಅಳುತ್ತ ಇರಿ... ನನ್ನ ಬೆಲೆಬಾಳುವ ಮೊಬೈಲ್ ಒಡೆದು ಹಾಕಿದ್ದೀರಲ್ಲಾ ಆತನ ರಂಪಾಟ ಕೇಳುತ್ತಾ ಅಡುಗೆ ಮನೆಯಲ್ಲಿದ್ದ ಆತನ ಪತ್ನಿ ಶಾಲಿನಿ ಅಲ್ಲಿಗೆ ಬಂದಳು. ಯಾಕೆ ರೀ...? ಅಮ್ಮನಿಂದ ಅರಿಯದೆ ಆದ ತಪ್ಪಲ್ಲವೇ..? ಅದಕ್ಕೆ ಯಾಕೆ ಇಷ್ಟೊಂದು ರೇಗಾಡುತ್ತಿದ್ದೀರಾ?

ಓ... ಇನ್ನು ನೀನು ಕೂಡಾ ಏನ್ನನಾದರೂ ಎಲ್ಲಾ ತೆಗೆದು ಎಸೆದು ಒಡೆದಾಕು... ನೀವೆಲ್ಲಾ ಸೇರಿ ನನಗೆ ಹುಚ್ಚು ಹಿಡಿಸುತ್ತೀರಿ... ಅಂತ ಹೇಳುತ್ತಾ ಆತ ಕೋಪದಲ್ಲಿ ಮನೆಯಿಂದ ಹೊರ ನಡೆದ...

ಆ ತಾಯಿ ಆ ಕೋಣೆಯ ಮೂಲೆಯಲ್ಲಿ ಕುಳಿತು ಬಿಕ್ಕಿ ಬಿಕ್ಕಿ ಅತ್ತಳು....

ಸೊಸೆ ಶಾಲಿನಿ ಆಕೆಯ ಹತ್ತಿರ ಬಂದು ಆಕೆಯನ್ನು ಹಿಡಿದು ಎಬ್ಬಿಸುತ್ತಾ. "ಬಿಟ್ಟಾಕಿ ಅಮ್ಮಾ ಅಳಬೇಡಿ... ನಿಮ್ಮ ಮಗನಿಗೆ ಹುಚ್ಚು ಏನೋ ಟೆನ್ಷನ್ ನಲ್ಲಿ ಏನೋ ಹೇಳಿದ್ದಾರೆ ಬೇಜಾರು ಮಾಡ್ಕೋಬೇಡಿ" ಅಂತ ಸಾಂತ್ವನ ಹೇಳುತ್ತಾಳೆ.

ಕಣ್ಣೀರನ್ನು ಒರೆಸುತ್ತಾ ಆ ತಾಯಿ ಹೇಳುತ್ತಾಳೆ. : "ಮಗಳೇ ನಾನು ಈಗ ಬರುತ್ತೇನೆ" ಅಂತ ಮನೆಯಿಂದ ಹೊರಗಡೆ ಹೆಜ್ಜೆ ಹಾಕುವಷ್ಟರಲ್ಲಿ ಸೊಸೆ ಶಾಲಿನಿ ಕೇಳಿದಳು "ಈಗ ಎಲ್ಲೋಗುತ್ತಿದ್ದೀರಾ ಅಮ್ಮಾ...?

ಅಮ್ಮ – ನಾನು ಬೇಗನೇ ಬರುತ್ತೇನೆ...

ಮಧ್ಯಾಹ್ನ ಊಟಕ್ಕೆ ಬಂದ ಮಗ ಪತ್ನಿ ಶಾಲಿನಿಯತ್ರ ಅಮ್ಮನನ್ನು ವಿಚಾರಿಸಿದ– "ಅಮ್ಮ ಎಲ್ಲಿ....?" ಶಾಲಿನಿ – ನಂಗೊತ್ತಿಲ್ಲ... ಅತ್ತು ಅತ್ತು ಸುಸ್ತಾದ ಅಮ್ಮ ಬೇಗ ಬರುತ್ತೇನೆ ಅಂತ ಹೇಳುತ್ತಾ ಎಲ್ಲೋ ಹೋದರು.

ಆತ ಹಾ ಕತ್ತಲಾಗುವಾಗ ಬರಬಹುದು...

ಶಾಲಿನಿ ರೀ ಅಮ್ಮ ಎಲ್ಲಿಗೆ ಹೋಗಿದ್ದು ಅಂತ ಗೊತ್ತಿಲ್ಲ... ನಿಮ್ಮ ತಂಗಿಯ ಮನೆಗೇನಾದರೂ ಹೋಗಿರಬಹುದೇ..? ಒಮ್ಮೆ ಹೋಗಿ ವಿಚಾರಿಸಿ ಬನ್ನಿ...

ಆತನ ಸಿಟ್ಟು ಇನ್ನೂ ಕಡಿಮೆಯಾಗಿರಲಿಲ್ಲ... "ಹುಡುಕೋದಕ್ಕೆ ನನಗೆ ಸಮಯವಿಲ್ಲ ಬೇಕಿದ್ದರೆ ನೀನೇ ಹೋಗಿ ಹುಡುಕು..." ಆತ ಸಿಟ್ಟಲ್ಲಿ ಹೇಳಿದ.

ರಾತ್ರಿ ತಡವಾಗಿ ಆತ ಮನೆಗೆ ಬಂದ....

ಬಾಗಿಲನ್ನು ತಟ್ಟುತ್ತಾ "ಶಾಲೂ (ಶಾಲಿನಿ) ಬಾಗಿಲು ತೆರೆ..."

ಶಾಲಿನಿ ಬಾಗಿಲನ್ನು ತೆರೆಯುತ್ತಾ ಆತನನ್ನು ದುರುಗುಟ್ಟಿ ನೋಡಿದಳು...

ಯಾಕೋ ನಿನ್ನ ಮುಖ ಊದಿಕೊಂಡಿದೆ...? ಊಟ ಬಡಿಸು...

ಶಾಲಿನಿ ತುಸು ಕೋಪದಿಂದ ಬೇಕಿದ್ದರೆ ಬಡಿಸಿ ತಿನ್ನಿ....

ಆತ ಯಾಕೋ... ಏನಾಯಿತೋ...? ಮತ್ತೆ ನೀನಿರೋದು ಯಾಕೇಳು...? ಅಮ್ಮ ಬಂದ್ರಾ...? ಎಷ್ಟೊತ್ತಿಗೆ ಬಂದದ್ದು...?

ಶಾಲಿನಿ – ಮ್... ಸಂಜೆ ಬಂದರು... ಪಾಪ ಮಲಗಿದ್ದಾರೆ...

ತಗೊಳ್ಳಿ .... ನೀವು ಬರುವಾಗ ನಿಮ್ಮಹತ್ರ ಕೊಡೋಕ್ಕೆ ಹೇಳಿ ನನ್ನತ್ರ ಕೊಟ್ಟು ಅಮ್ಮ ಈಗ ಮಲಗಿದಷ್ಟೇ ಅಂತ ಹೇಳುತ್ತಾ ಶಾಲಿನಿ ಒಂದು ಚಿಕ್ಕ ಕವರನ್ನು ತೆಗೆದು ಆತನ ಕೈಯಲ್ಲಿ ಕೊಟ್ಟಳು.

ಆತ ಆ ಕವರನ್ನು ಓಪನ್ ಮಾಡಿ ನೋಡಿದ.

ತುಂಬಾ ಎರಡು ಸಾವಿರದ ನೋಟುಗಳು..! ಇದೆಲ್ಲಿಂದ ಅಮ್ಮನಿಗೆ ಸಿಕ್ಕಿದ್ದು...!? ಇದನ್ನು ನನಗೆ ಯಾಕೆ ಕೊಟ್ಟಿದ್ದಾಳೆ?

ಶಾಲಿನಿ ನಿಮ್ಮ ಫೋನ್ ಒಡೆದದ್ದಕ್ಕೆ ಅಮ್ಮ ಕೊಟ್ಟದ್ದು ಬೆಳಿಗ್ಗೆ ಹೋಗಿ ಹೊಸತು ಖರೀದಿಸಿಕೊಳ್ಳಿ ಈಗ ನಿಮಗೆ

ಸಂತೋಷ ಆಯಿತಲ್ಲಾ ಆಕೆ ಸ್ವಲ್ಪ ಕೋಪದಿಂದ ಹೇಳಿದಳು.

ಶಾಲಿನಿ ನಿಮ್ಮ ಅಪ್ಪಾಜಿ ಸಾವನ್ನಪ್ಪೋದಕ್ಕೆ ಮುಂಚೆ ಖರೀದಿಸಿ ಕೊಟ್ಟದ್ದು ಅಂತ ಹೇಳುತ್ತಾ ಕಿವಿಯೋಲೆಯನ್ನು ತುಂಬಾ ಜಾಗರೂಕತೆಯಿಂದ ಜೋಪಾನವಾಗಿ ಧರಿಸುತ್ತಿದ್ದರಲ್ಲಾ...?

ಅಂದು ನೀವು ಬೈಕ್ ಖರೀದಿಸಲು ಆ ಕಿವಿಯೋಲೆಯನ್ನು ಅಡವಿಡಲು ಕೇಳಿದಾಗ ಇದು ನಿನ್ನ ಅಪ್ಪಾಜಿಯ ಕೊನೆಯ ಗಿಫ್ಟಾಗಿದೆ ಇದನ್ನು ನಾನು ಸತ್ತ ನಂತರವೇ ಕಿವಿಯಿಂದ ತೆಗೆದರೆ ಸಾಕು ಅಂತ ಹೇಳಿರಲಿಲ್ಲವೇ ಅದನ್ನೇ ಅಮ್ಮ ಮಾರಿದ್ದಾರೆ. ಪಾಪ.

ಆತ ತಲೆತಗ್ಗಿಸಿ ನಿಂತ ಶಾಲಿನಿ ಮುಂದುವರಿಸುತ್ತ ರೀ ನಿಮ್ಮ ಫೋನ್ ಒಡೆದಾಗ ನೀವು ಅಮ್ಮನಿಗೆ ಕೋಪದಲ್ಲಿ ಏನೆಲ್ಲಾ ಹೇಳಿದಿರಿ? ನಿಮ್ಮನ್ನು ಅಮ್ಮನ ಹೊಟ್ಟೆಯಿಂದ ಆಪರೇಷನ್ ಮಾಡಿ ಹೊರತೆಗೆಯುವಾಗ ಅಮ್ಮನ ರಕ್ತವೆಷ್ಟು ಹೋಗಿರಬಹುದು? ಆ ಅಮ್ಮ ಎಷ್ಟೊಂದು ನೋವನ್ನು ಲೆಕ್ಕಿಸದೆ ನಿಮ್ಮ ಅಳುವನ್ನು ನಿಲ್ಲಿಸುವ ಸಲುವಾಗಿ ಎಷ್ಟು ಬಾರಿ ನಿಮ್ಮನ್ನು ಮುದ್ದಿಸಿರಬಹುದು? ಬರೀ ಒಂದು ಮೊಬೈಲಿಗೋಸ್ಕರ ಲೆಕ್ಕ ಹೇಳಿದೀರಲ್ಲಾ?

ಅಷ್ಟೆಲ್ಲಾ ಅಮ್ಮನಹತ್ರ ಹೇಳಬಾರದಿತ್ತು. ರೀ ಆ ಅಮ್ಮ ಸಹಿಸದ ತ್ಯಾಗ, ಸಹನೆಗೆ ಬೆಲೆಕಟ್ಟಲು ನಿಮ್ಮಿಂದ ಸಾಧ್ಯವೇ..? ನಿಮಗೋಸ್ಕರ ವ್ಯಯಿಸಿದ ನಿದ್ದೆಯಿಲ್ಲದ ರಾತ್ರಿಗಳಿಗೆ ನಿಮ್ಮಿಂದ ಬೆಲೆ ಕಟ್ಟಲು ಸಾಧ್ಯವೇ?

ಈ ಜನ್ಮವಿಡೀ ನೀವು ಸಂಪಾದಿಸಿದ ಸಂಪತ್ತನ್ನೆಲ್ಲಾ ಅಮ್ಮನ ಹೆಸರಿಗೆ ಬರೆದು ಕೊಟ್ಟರೂ ನಿಮಗಾಗಿ ಆ ಅಮ್ಮ ಅನುಭವಿಸಿದ ತ್ಯಾಗ ಸಹನೆಗಳಿಗೆ ಬೆಲೆಕಟ್ಟಲು ಸಾಧ್ಯವೇ ಇಲ್ಲಾ ರೀ...

ತನ್ನ ತಪ್ಪಿನ ಅರಿವಾಗಿ ಆತನ ಕಣ್ಣುಗಳು ತುಂಬಿದ್ದವು...

ಆತ ಶಾಲೂ ನೀನು ದೇವತೆಯಾಗಿದ್ದಿ. ಆ ಅಮ್ಮನ ಸೊಸೆಯಾಗಲು ನಿನಗಿಂತಲೂ ಯೋಗ್ಯಳಾದ ಹೆಣ್ಣೊಬ್ಬಳು ಬೇರೆ ಯಾರೂ ಇರಲಾರಳು...

ಅಯ್ಯೋ ದೇವರೇ ನಾನು ಬೆಳಗ್ಗೆ ಅಮ್ಮನತ್ರ ಏನೆಲ್ಲಾ ಹೇಳಿರುವೆ..! ಆತ ಅತ್ತೇಬಿಟ್ಟ...

ಶಾಲಿನಿ ಪರವಾಗಿಲ್ಲ ರೀ... ತಪ್ಪಿನ ಅರಿವಾಗಿದೆಯಲ್ಲಾ ಬಿಡಿ... ನಾಳೆ ಬೆಳಿಗ್ಗೆ ಅಮ್ಮನಲ್ಲಿ ಕ್ಷಮೆ ಕೇಳಿ ಪ್ರಾಯಶ್ಚಿತ್ತ ಮಾಡಿದರಾಯಿತು... ಅಂತ ಸಾಂತ್ವನ ಹೇಳಿದಳು ಆಕೆ...

ಬೆಳಿಗ್ಗೆ ಅಮ್ಮ ಏಳೊದಕ್ಕೆ ಮುಂಚೆನೇ ಆತ ಬೈಕ್ ನಲ್ಲಿ ಹೊರಟ ಅಮ್ಮನ ಪರ್ಸ್‌ನಿಂದ ಕಿವಿಯೋಲೆ ಮಾರಿದ ಬಿಲ್ಲನ್ನು ತೆಗೆದ. ಅಡ್ರೆಸ್ ಹುಡುಕುತ್ತಾ ಆ ಚಿನ್ನದ ಅಂಗಡಿಯನ್ನು ತಲುಪಿದ

ಆತ ಅಂಗಡಿಯಾತನತ್ರ ಹೇಳಿದ ಸರ್ ಈ ಬಿಲ್ಲಿನಲ್ಲಿರುವ ಚಿನ್ನವನ್ನು ನಿನ್ನೆ ನನ್ನ ಅಮ್ಮ ಇದೇ ಅಂಗಡಿಯಲ್ಲಿ ಮಾರಿದ್ದಾರೆ. ಅದು ನನಗೆ ವಾಪಸ್ ಬೇಕು...

ಅಂಗಡಿಯಾತ ಬಾಸ್ ಚಿನ್ನ ಇಲ್ಲೇ ಇದೆ. ಹಣ ಕೊಟ್ಟು ಚಿನ್ನವನ್ನು ತೆಗೊಂಡು ಹೋಗಿ...

ಆತ ದುಡ್ಡುಕೊಟ್ಟು ಚಿನ್ನವನ್ನು ತೆಗೊಂಡ ಮನೆಗೆ ಹಿಂತಿರುಗಿದ

ದೂರದಿಂದ ಮನೆಯ ಮುಂದೆ ಸೇರಿರುವ ಜನರನ್ನು ನೋಡಿದ...

ಆತ ಬೈಕ್ ನಿಲ್ಲಿಸಿ ಮನೆಯೊಳಗೆ ಓಡಿದ...

ಆವೇಶಭರಿತನಾಗಿ ಬಂದ ಆತನನ್ನು ಪಕ್ಕದ ಮನೆಯ ಮಧ್ಯವಯಸ್ಕರೊಬ್ಬರು ಹಿಡಿದು ನಿಲ್ಲಿಸಿದರು.

ನಿನ್ನ ಅಮ್ಮ ರಾತ್ರಿಯೇ ನಿಮ್ಮೆಲ್ಲರನ್ನು ಅಗಲಿದ್ದಾರೆ.

ಆತ ಅಮ್ಮ ಮಲಗಿದ ಕೋಣೆಯೊಳಗೆ ಓಡಿ ಹೋಗಿ ಅಮ್ಮನ ಪಾದದ ಮೇಲೆ ತಲೆಯಿಟ್ಟು ಚಿಕ್ಕ ಮಕ್ಕಳ ಹಾಗೆ ಕಿರುಚುತ್ತಾ ಅತ್ತ...

ಅತ್ತು ಸುಸ್ತಾದ ಆತ ಒಬ್ಬ ಹುಚ್ಚನಂತೆ ಅಮ್ಮನ ಕಿವಿಯಲ್ಲಿ ಕಿವಿಯೋಲೆಯನ್ನು ಹಾಕುತ್ತಾ ಅಮ್ಮನ ಮುಖದಲ್ಲೆಲ್ಲಾ ಮುದ್ದಾಡಿದ...

ಅಗಲೂ ಆತನ ಕಿವಿಯಲ್ಲಿ ಅಮ್ಮನ ಆ ಮಾತುಗಳು ಮೊಳಗಯತ್ತಿತ್ತು . ಇದು ನಿನ್ನ ಅಪ್ಪಾಜಿ ಖರೀದಿಕೊಟ್ಟ ಕೊನೆಯ ಗಿಫ್ಟಾಗಿದೆ. ಇದನ್ನು ನನು ಸತ್ತ ನಂತರವೇ ನನ್ನ ಕಿವಿಯಿಂದ ತೆಗೆದರೆ ಸಾಕು"

ಒಂದು ಮತಿನಿಂದ ಕೂಡ ಹೆತ್ತವರನ್ನು ನೋಯಿಸದಿರಿ ಸ್ನೇಹಿತರೆ... ಕ್ಷಮೆ ಕೇಳಲು ಕೂಡಾ ಸಮಯ ಕೊಡದೆ ನಮ್ಮನ್ನು ಅಗಲಿ ದುರವಾಗಬಹುದು.


ಮನುಷ್ಯರನ್ನು ಪ್ರೀತಿಸಿ.

ವಸ್ತುಗಳನ್ನು ಉಪಯೋಗಿಸಿ. ★

## ಮನಸ್ಸೇ ತಣ್ಣಗಿರು

...4ನೇ ಪುಟದಿಂದ

ಮನುಷ್ಯನನ್ನು ಸದ್ಗುಣಗಳ ಹಾದಿಯ ಕಡೆಗೆ ಕರೆಯುತ್ತಿರುತ್ತದೆ. ಇರೋ ಎರಡು ದಿನ ಬರೀ ಜಗಳ ಹೊಡೆದಾಟ, ಕೊಲೆ, ಸುಲಿಗೆ, ರಂಪಾಟ ಇಂತವೇ ಆಗೋದ್ರೆ ಖುಷಿ ಪಡೋದು ಯಾವಾಗೊ ಮಂಕೆ" ಅಂತ ಹೇಳ್ತಿರುತ್ತೆ. ಆದ್ರೆ ವಕ್ರ ಬುದ್ದಿ ಕೇಳಲ್ಲ. ಮಾಡ ಬಾರದನ್ನೆಲ್ಲಾ ಮಾಡಿಸಿ. ಕೊನೆಗೆ ದುಃಖದ ಕಡಲಿಗೆ ಕಳಿಸುತ್ತೆ. ಹಾಗಾಗಿ ಯಾರೇ ಆಗಿರಲಿ ಮೊದಲು ಮನಸ್ಸಿನ ಮಾತಿಗೆ ಬೆಲೆ ಕೊಡ್ಬೇಕು. ಒಳ್ಳೇತನ ಇದ್ರೆ ಏನ್ಬೇಕಾದ್ರು ಆಗ್ಬಹುದು. ಅದಕ್ಕೆ ಕಾಲನೆ ಉತ್ತರ ಕೊಡುತ್ತೆ ಅಲ್ವೇ? ಮನಸ್ಸು ಎಲ್ಲದಕ್ಕೂ ಮೂಲ. ಬುದ್ದಿ ಎಲ್ಲ ಬಗೆಯ ಕಲಹಕ್ಕೆ ಮೂಲ. ಯೋಚನೆ ಮಾಡಿ ಮನಸ್ಸು ಹೇಳಿದಂತೆ ಗುಣವಂತರಾಗಿರುವಿರೊ ಇಲ್ಲ ವಕ್ರ ಬುದ್ದಿಯ ನಂಬಿ ಹಲವಾರು ಪ್ರಕರಣಕ್ಕೆ ಸಿಲುಕಿ ಬಂಧಿ ಆಗ್ತಿರೊ ಆಯ್ಕೆ ನಿಮ್ಮದು. ★




Sanatan Dharma is not just belief it is a complete knowledge system.
From the eternal Vedas to the profound Darshanas, every layer is designed to answer one question:

- What is truth, and how do we realize it?
- Vedas Foundation of all knowledge

- Darshanas Logical exploration of reality (Nyaya, Vaisheshika, Samkhya, Yoga, Mimamsa, Vedanta)
- Yoga — Practical path (Jnana, Karma, Bhakti, Raja)
- Pramana — Methods to verify truth (logic, perception, experience)

This is not blind faith.
This is structured, scientific spirituality developed thousands of years ago.

While the world debates belief vs science,
Sanatan Dharma already united them.

It teaches:
Know → अनुभव (Experience) → Realize → Become

- "Truth is not imposed, it is discovered."



ಶ್ರೀ ಶಿವಮೂರ್ತಿ ಕೀಲಾರ
ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್
ಪ್ರಧಾನ ಕಾರ್ಯದರ್ಶಿ,
ಅಭಿನವ ಭಾರತಿ ಶಿಕ್ಷಣ ಟ್ರಸ್ಟ್

# ಪರೀಕ್ಷೆ ಫಲಿತಾಂಶ

ಹೆತ್ತವರು ನಾವೇ
ಹೊತ್ತು ಪೊರೆದವರೂ ನಾವೇ
ಈಗ ಸಿ.ಸಿ.ಕ್ಯಾಮೆರಾ ದೂರಿದೊಡೆಂತಯ್ಯ

ವರುಷ ಪೂರ ಇಲ್ಲದ ಸಂಭ್ರಮ
ಕಡೆ ಆರು ದಿನಗಳ ಚಟುವಟಿಕೆಯ ಸಂಗಮ
ಈಗ ಸಂಭ್ರಮ ಅಲಿದು ಭ್ರಮೆಯಷ್ಟೇ ಉಳಿವುದಯ್ಯ



ಕಳೆದ ಫಲಿತಾಂಶಗಳು ಸಾಧನೆಯ ಗರಿ
ಈ ಸಾಲು ಅಹವಾಲುಗಳ ಪರಿ
ಭವಿಷ್ಯದ ಸವಾಲುಗಳಿಗೆ ಈಗಲೇ ಸಿದ್ಧರಾಗಬೇಕಯ್ಯ

ಹಿಂದೊಂದಿತ್ತು ಕಾಲ
ಮುಂದೆ ಗುರಿ ಹಿಂದೆ ಹುರು
ಈಗೆಲ್ಲರೂ ಕಣ್ಣು ಕಾಣದ ಗಾವಿಲರಯ್ಯ

ಆದದ್ದೆಲ್ಲ ಒಳ್ಳೆಯದಕ್ಕೇ
ಮುಂದೆ ಆಗಲಿರುವುದೂ ಒಳ್ಳೆಯದಕ್ಕೇ
ರೌರವ ಸ್ಥಿತಿ ಅಳಿದು ಒಡಮೂಡಲಿ ಕಲಿಕೆಯ ಕಲರವ

ಕಲಿಯುಗ ಕಲಿಯಲಿಲ್ಲ
ಕಲಿಸುವಾಗ ನಿರ್ಲಕ್ಷ್ಯ ತೋರಿದರೆಲ್ಲ
ಈಗ ಫಲಿತಾಂಶದ ನೆನೆದು ಅಳುಕಿದರೆಂತಯ್ಯ

ಕಲಿಯಲೂ ಸಕಾಲ ಕಲಿಸಲೂ ಸಕಾಲ
ತಪ್ಪಿತಯ್ಯ ಕಾಪಿ ಸಂಸ್ಕೃತಿಯ ಅಕಾಲ
ಭವಿಷ್ಯದಿ ನೈಜ ಗುರುಶಿಷ್ಯರಿಗೆ ಗೌರವಾದರ ವಿಪುಲ

ಓದುತ್ತಿದ್ದವನಿಗೆ ತೊಂಭತ್ತೈದು
ಅಕ್ಷರ ಬಾರದವನಿಗೂ ತಪಂಭತ್ತೈದೇ
ಈಗ ನೂರರ ಫಲಿತಾಂಶದ ಕಾಲರ್ ಕಾಣದಾಯ್ತಯ್ಯ

-ಎನ್. ಸಿ. ಶಿವಕುಮಾರ್
ಶಿಕ್ಷಕರು, ನಾಗಮಂಗಲ.



# ಪ್ರಯತ್ನದ ಫಲ

ಮರಳುಗಾಡಿನಲ್ಲಿ ತನ್ನ ಗೆಳೆಯರ ಗುಂಪಿನೊಂದಿಗೆ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬ ಬಾರೀ ಮರಳು ಗಾಳಿಗೆ ಸಿಲುಕಿ ಗುಂಪಿನಿಂದ ದೂರವಾದ. ದಾರಿ ಕಾಣದೆ ಕಳೆದು ಹೋದ. ಜನವಸತಿಯನ್ನು ಹುಡುಕಿ ಹೊರಟ. ಆದರೆ ಎತ್ತ ನೋಡಿದರೂ ಮರಳೇ ಮರಳು. ದಾರಿ ಕಾಣದಾದ. ಅಲೆದು ಅಲೆದು ಸುಸ್ತಾದ ಆತನ ಬಳಿ ಇದ್ದ ಕ್ಯಾನ್‌ಗಳಲಿ ನೀರೂ ಖಾಲಿ ಆಗಿತ್ತು. ನೆತ್ತಿಯ ಮೇಲೆ ಸೂರ್ಯ ಸುಡುತ್ತಿದ್ದ. ಕೆಳಗೆ ಮರಳು ಕಾದ ಕೆಂಡವಾಗಿತ್ತು. ನಡೆದು ನಡೆದು ಮೈಯಿಂದ ಬೆವರು ಇಳಿದು ಆ ವ್ಯಕ್ತಿ ನಿತ್ರಾಣನಾದ. ಇನ್ನು ತನಗೆ ನೀರು ಸಿಗದಿದ್ದರೆ ತನ್ನ ಜೀವ ಹೋಗುವುದು ಖಚಿತ ಎಂಬುದನ್ನು ಮನಗಂಡ. ಕೊನೆ ಉಸಿರಿರುವ ತನಕ ದಾರಿ ಹುಡುಕುವ ಛಲದಿಂದ ದೇವರ ಮೇಲೆ ಭಾರ ಹಾಕಿ ಮನಸ್ಸಿಗೆ ಸರಿ ಎನಿಸಿದ ದಿಕ್ಕಿನತ್ತ ಹೆಜ್ಜೆ ಹಾಕಿದ ಸ್ವಲ್ಪ ದೂರ ನಡೆದ ಮೇಲೆ ಅವನಿಗೆ ಅಲ್ಲಿ ಒಂದು ಪಾಳು ಮನೆ ಕಾಣಿಸಿತು. ಈ ಮನೆಯಲ್ಲಿ ತನಗೆ ನೀರು ಸಿಗಬಹುದು ಎಂಬ ನಿರೀಕ್ಷೆಯಿಂದ ಅತ್ತ ಹೆಜ್ಜೆ ಹಾಕಿದ. ನೀರು, ಆಹಾರ ಇಲ್ಲದೆ ನಿತ್ರಾಣನಾಗಿದ್ದ ಅವನಿಗೆ ಅಷ್ಟು ದೂರ ನಡೆಯುವ ಶಕ್ತಿಯೂ ಇಲ್ಲದಾಗಿತ್ತು.



ಸಂಗ್ರಹ :
ಶ್ರೀ ಮಲ್ಲಿನಾಥ ರೆಡ್ಡಿ

ಸುಸ್ತಾಗಿ ಕುಸಿದು ಬಿದ್ದ. ಆದರೂ ಕೊನೆಯ ಆಸರೆ ಆ ಪಾಳು ಮನೆಯಲ್ಲಿ ಸಿಕ್ಕಿತು ಎಂದು ತೆವಳುತ್ತಾ ಸಾಗಿದ. ಕಷ್ಟ ಪಟ್ಟು ಆ ಮನೆಯ ಮುರಿದ ಬಾಗಿಲು ತಳ್ಳಿ ಒಳಹೋದ. ಕಾದ ನೆಲ, ಸುಡುತ್ತಿದ್ದ ಸೂರ್ಯನಿಂದಂತೂ ಮುಕ್ತಿ ದೊರಕಿತು. ಒಳ ಹೋದ ಆ ವ್ಯಕ್ತಿ ನನಗೆ ಕುಡಿಯಲು ನೀರು ಸಿಗುತ್ತದೆಯೇ ಎಂದು ಹುಡುಕಾಡಿದ. ಅಲ್ಲಿ ಒಂದು ನೀರೆತ್ತುವ ಯಂತ್ರ ಇತ್ತು. ಆ ಯಂತ್ರಕ್ಕೆ ಪೈಪ್ ಜೋಡಿಸಲಾಗಿತ್ತು. ಪಂಪ್ ತಿರುಗಲು ಚಕ್ರವನ್ನೂ ಅಳವಡಿಸಲಾಗಿತ್ತು. ಚಕ್ರ ತಿರುಗಿಸಲು ಹ್ಯಾಂಡಲ್ ಹಾಕಲಾಗಿತ್ತು. ಇದನ್ನು ನೋಡಿದ ವ್ಯಕ್ತಿ ನೀರಿಗಾಗಿ ಹ್ಯಾಂಡಲ್ ತಿರುಗಿಸಿದ. ಚಕ್ರ ತಿರುಗಿತು, ಮೋಟರ್ ಸಹ ತಿರುಗಿತಾದರೂ ಪೈಪ್‌ನಿಂದ ನೀರು ಬರಲಿಲ್ಲ. ಚಕ್ರ ತಿರುಗಿಸಿ ತಿರುಗಿಸಿ ಸುಸ್ತಾದ ವ್ಯಕ್ತಿ ಬೇರೆಲ್ಲಾದರೂ ನೀರು ಸಿಗುವುದೇ ಎಂದು ಹುಡುಕಿದ. ಆ ಪಾಳು ಮನೆಯ ಮೂಲೆಯಲ್ಲಿ ಒಂದು ಬಾಟಲಿ ಇತ್ತು. ಅದರಲ್ಲಿದ್ದ ನೀರು ಆವಿ ಆಗದಂತೆ ಮುಚ್ಚಳ ಹಾಕಲಾಗಿತ್ತು. ಸದ್ಯ ಬದುಕಿದೆಯಾ ಬಡಜೀವ ಎಂದು ನೀರು ಕುಡಿಯಲು ಆ ಬಾಟಲ್ ಮುಚ್ಚಳ ತೆಗೆದ, ಇನ್ನೇನು ನೀರು ಕುಡಿಯಬೇಕು ಎನ್ನುವಾಗ. ಬಾಟಲಿ ಮೇಲೆ ಅಂಟಿಸಲಾಗಿದ್ದ ಚೀಟಿ ಕಾಣಿಸಿತು. ಅದರಲ್ಲಿ ಹೀಗೆ ಬರೆದಿತ್ತು. ನೀವು ಈ ನೀರನ್ನು ಯಂತ್ರದ ಪಕ್ಕದಲ್ಲಿರುವ ಫನಲ್ ನಲ್ಲಿ ಹಾಕಿ. ನಂತರ ಗಾಲಿ ತಿರುಗಿಸಿ ಜೋರಾಗಿ ನೀರು ಬರುತ್ತದೆ. ಸ್ನಾನ ಮಾಡಿ, ನಿಮ್ಮ ಬಳಿ ಇರುವ ಕ್ಯಾನ್ ಗಳಲ್ಲಿ ನೀರು ತುಂಬಿಸಿಕೊಳ್ಳಿ ಬಳಿಕ ಮರೆಯದೆ ಈ ಬಾಟಲಿಗೂ ನೀರು ತುಂಬಿಸಿ ಮುಚ್ಚಿ, ನಿಮ್ಮಂತೆ ನೀರು ಹುಡುಕಿ ಬರುವವರಿಗೆ ಇದು ಸಹಾಯ ಆಗುತ್ತದೆ. ವ್ಯಕ್ತಿ ಗೊಂದಲಕ್ಕೆ ಬಿದ್ದ ಕೈಯಲ್ಲಿರುವ ನೀರು ಕುಡಿಯುವುದೋ, ಇಲ್ಲ ಚೀಟಿಯಲ್ಲಿ ಬರೆದಿರುವಂತೆ ನೀರನ್ನು ಫನಲ್ ಗೆ ಹಾಕಿ ಗಾಲಿ ತಿರುಗಿಸಿ ಹೆಚ್ಚು ನೀರುಪಡೆಯಲು ಪ್ರಯತ್ನ ಮಾಡುವುದೋ ಎಂದು ಯೋಚಿಸಿದ. ಆಕಸ್ಮಾತ್ ಹಳೆಯ ಪಂಪ್ ನಿಂದ ನೀರು ಬಾರದಿದ್ದರೆ ಏನು ಮಾಡುವುದು ನೀರು ಕುಡಿದೇ ಬಿಡೋಣ ಎಂದುಕೊಂಡ ಈ ನೀರು ಎಷ್ಟು ಹೊತ್ತು ಇರಲು

ಸಾಧ್ಯ. ಈಗ ಜೀವ ಉಳಿದರೂ ನಾನು ಜನವಸತಿ ಹುಡುಕಿ ಹೊರಟರೆ ಮತ್ತೆ ನೀರಡಿಕೆಯಿಂದ ಸಾಯುವುದು ಖಂಡಿತ. ಹೆಚ್ಚು ನೀರು ಸಿಕ್ಕಿದರೆ ಬಾಟಲಿ, ಕ್ಯಾನ್ ಗಳಿಗೆ ತುಂಬಿಸಿಕೊಂಡು ಮುಂದೆ ಸಾಗಬಹುದು ಎಂದು ದೃಢ ನಿರ್ಧಾರ ಮಾಡಿ ಬಾಟಯಲ್ಲಿದ್ದ ನೀರನ್ನು ಪಂಪ್ ನ ಫನಲ್ ಮುಚ್ಚಳ ತೆರೆದು ಹಾಕಿದ, ಗಾಲಿ ತಿರುಗಿಸಿದ ಯಥೇಚ್ಛವಾಗಿ ನೀರು ಬಂತು. ಸ್ನಾನ ಮಾಡಿದ ಆಯಾಸ ತೀರಿಸಿಕೊಂಡ. ತನ್ನ ಬಾಟಲಿಗಳಿಗೆ, ಕ್ಯಾನ್ ಗಳಿಗೆ ನೀರು ತುಂಬಿಸಿದ. ಆ ಪುಟ್ಟ ಕ್ಯಾನ್ ಗೂ ನೀರು ಹಾಕಿದರೆ ಆ ಚೀಟಿಯ ಕೆಳಗೆ ಈ ಯಂತ್ರ ನೀರು ಹಾಕಿದರೆ ಕೆಲಸ ಮಾಡುತ್ತದೆ. ಅಂಜಿಕೆ ಬೇಡ ಎಂದು ಸಾಲು ಸೇರಿಸಿದ. ಬಳಿಕ ಇನ್ನೇನು ಹೊರಡಬೇಕು ಎಂದು ಬಾಗಿಲು ತೆಗೆದಾಗ ಆ ಬಾಗಿಲ ಹಿಂದೆ ಜನವಸತಿಗೆ ಸಾಗುವ ದಾರಿ ತೋರುವ ನಕ್ಷೆ ಕಾಣಿಸಿತು. ಆ ನಕ್ಷೆಯ ಮಾರ್ಗ ಅನುಸರಿಸಿ ಊರು ಸೇರಿದ.

ನಾವು ಯಾವಾಗಲೂ ಜೀವನದಲ್ಲಿ ಹತಾಶರಾಗಬಾರದು. ಕೊನೆ ಕ್ಷಣದವರೆಗೂ ಹೋರಾಟ ಮಾಡಬೇಕು. ಎಲ್ಲಕ್ಕಿಂತ ಮಿಗಿಲಾಗಿ ನಾವು ಈ ಸಮಾಜಕ್ಕೆ ಏನಾದರೂ ಕೊಟ್ಟರೆ ನಮಗೆ ಸಮಾಜ ಏನನ್ನಾದರೂ ಕೊಡುತ್ತದೆ ಎಂಬುದನ್ನು ಅರಿಯಬೇಕು. ಆ ವ್ಯಕ್ತಿ ತಾನು ಇದ್ದ ನೀರು ಕುಡಿಯದೆ ಪ್ರಯತ್ನ ಮಾಡಿದ್ದಕ್ಕೆ ಅವನಿಗೆ ಯಥೇಚ್ಛ ನೀರು ಸಿಕ್ಕಿತು. ಮತ್ತೆ ಆತ ಬಾಟಲಿಗೆ ನೀರು ತುಂಬಿಸಿಟ್ಟಿದ್ದರಿಂದ ಮುಂದೆ ಬರುವವರಿಗೂ ಅದು ನೆರವಾಗುವಂತಾಯಿತು. ನಾವು ಸದಾ ಭವಿಷ್ಯದ ಚಿಂತನೆ ಮಾಡಿದರೆ ಬದುಕು ಬಂಗಾರವಾಗುತ್ತದೆ. ಸ್ವಾರ್ಥಕ್ಕೆ ಸಿಲುಕಿದರೆ ಬದುಕು ನಾಶವಾಗುತ್ತದೆ......!! ★

# ಬದುಕು ಎಂದರೇನು?

ಒಬ್ಬೊಬ್ಬರದು ಒಂದೊಂದು ರೀತಿ: "ಯದ್ಭಾವಂ ತದ್ಭವತಿ" ಬುದ್ಧ ಹೇಳುತ್ತಾನೆ, "ಪ್ರೀತಿ ಮತ್ತು ಶಾಂತಿ", ದುರ್ಯೋಧನ ಹೇಳುತ್ತಾನೆ, "ಹಠ ಮತ್ತು ಛಲ", ಏಕಲವ್ಯ ಹೇಳುತ್ತಾನೆ , "ಗುರಿ". ಯುಧಿಷ್ಠಿರ ಹೇಳಿತ್ತಾನೆ, "ಧರ್ಮ". ಭೀಷ್ಮ ಹೇಳುತ್ತಾನೆ, "ಪ್ರತಿಜ್ಞೆ". ಸಂತ ಹೇಳುತ್ತಾನೆ, "ಭಕ್ತಿ". ಸನ್ಯಾಸಿ ಹೇಳುತ್ತಾನೆ, "ವೈರಾಗ್ಯ", ಅಲೆಕ್ಸಾಂಡರ್ ಹೇಳುತ್ತಾನೆ, "ವಿಜಯ". ಶ್ರೀಮಂತ ಹೇಳುತ್ತಾನೆ, "ಮೋಜು ಮತ್ತು ಮಸ್ತಿ", ಮಧ್ಯಮ ವರ್ಗದವನು ಹೇಳುತ್ತಾನೆ, "ಉದ್ಯೋಗ". ಹಸಿದವನು ಹೇಳುತ್ತಾನೆ, "ಅರ್ಧ ರೊಟ್ಟಿ". ಹೀಗೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಬದುಕು ಕಾಣುತ್ತದೆ. ಅವರವರ ಆಲೋಚನೆಯಂತೆ ಅವರವರು ಬದುಕನ್ನು ಸಮರ್ಥಿಸುತ್ತಾರೆ.



ಬದುಕೆನ್ನುವುದು ಸುಂದರವಾದ ಅನುಭವ. ಪ್ರತಿದಿನ, ಪ್ರತಿ ಗಂಟೆ, ಪ್ರತಿ ನಿಮಿಷ ಎಲ್ಲವೂ ಅಮೂಲ್ಯ. ಈ ಯಾವುದು ಹಿಂತಿರುಗಿ ಬರುವುದಿಲ್ಲ. ಒಮ್ಮೆ ಕಳೆದರೆ ಮುಗಿಯಿತು. ಆದ್ದರಿಂದಲೇ ಪ್ರತಿ ಕ್ಷಣವು ಬದುಕು ನವನವೀನ. ಹೀಗೆಯೇ ನಮ್ಮ ಬದುಕು ಅನಿಶ್ಚಿತ ಕೂಡಾ. ಮುಂದಿನ ಕ್ಷಣ ಏನೆಂದು ಯಾರಿಗೂ ತಳಿಯದು, ಈ ಕ್ಷಣವೇ ಪರಮ ಪವಿತ್ರ. ಈ ಕ್ಷಣವನ್ನು ಸಂಪೂರ್ಣ ಅನುಭವಿಸುವುದೇ ಬದುಕು. ಸಂಘರ್ಷ, ಮನಸ್ತಾಪ, ಕೋಪ, ದ್ವೇಷ ಇವುಗಳನ್ನು ಕಡಿಮೆ ಮಾಡುತ್ತಾ ಪ್ರೀತಿ, ಸೌಹಾರ್ದ, ಸಹಾಯ, ಕಾರುಣ್ಯ ಮತ್ತು ಹಸನ್ಮುಖದ ನಡುವೆ ಬದುಕುವುದೇ ಸಾರ್ಥಕ ಜೀವನ. ನಮ್ಮ ಚಿಂತನೆ ಸಕಾರಾತ್ಮಕವಾಗಿದ್ದರೆ ಕಷ್ಟ, ನೋವು, ನಿರಾಸೆ, ದುಃಖ ಎಲ್ಲವು ಎಲ್ಲರಿಗೂ ಇದೆ. ಆದರೆ, ಅವುಗಳ ಮಧ್ಯೆ ಸಂತೋಷದಿಂದ, ತೃಪ್ತಿಯಿಂದ ಬದುಕುವುದೇ ಜೀವನ.

–ಡಾ. ಗುರುರಾಜ ಪೋಶೆಟ್ಟಹಳ್ಳಿ




ಒಂದು ಹಳ್ಳಿಯಲ್ಲಿ ಮುತ್ತುಶೆಟ್ಟಿ ಎಂಬುವವನು ವ್ಯಾಪಾರಿಗಳ ವಂಶದಲ್ಲಿ ಜನಿಸಿದ್ದ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ಕಷ್ಟದಿಂದ ಬೆಳೆದಿದ್ದ ಅವನಿಗೆ ಮನೆಯಲ್ಲಿ ಸಂಪತ್ತು ರಾಶಿ ಬಿದ್ದರೆ ಮಾತ್ರ ಸುಖವಾಗಿ ಬದುಕಬಹುದೆಂಬ ಭಾವನೆ ಬೆಳೆದಿತ್ತು. ಸಂಪತ್ತು ಪ್ರಾಮಾಣಿಕನ ಬಳಿಗೆ ಬರುವುದು ನಿಧಾನ. ಧಾರಾಳವಾಗಿ ಹಣ ಗಳಿಸಬೇಕಾದರೆ ಏನಾದರೂ ಅಡ್ಡ ದಾರಿ ಹಿಡಿಯಬೇಕೆಂಬ ಕೆಟ್ಟ ಯೋಚನೆ ಅವನ ಮನಸ್ಸನ್ನು ಆವರಿಸಿತ್ತು.

ಮುತ್ತುಶೆಟ್ಟಿಯ ಮನೆಯ ಬಳಿ ಸುಗಂಧ ಬೀರುವ ರತ್ನಗಂಧ ಎಂಬ ಮರಗಳಿದ್ದವು. ಅವನ ತಂದೆ ಅದರ ಗಿಡ ನೆಟ್ಟು ನೀರೆರೆದು ಆ ಮರವಾಗುವ ತನಕ ಬೆಳೆಸಿದ್ದ. ಯಾವ ಕಾಲಕ್ಕೂ ಈ ಮರಗಳನ್ನು ಕಡಿದು ಮಾರಾಟ ಮಾಡ ಬಾರದು. ಇದರ ಹವೆ ಬಲು ದೂರದವರೆಗೂ ಹಾಳಿಯನ್ನು ಶುದ್ಧೀಕರಿಸಿ ಒಳ್ಳೆಯ ಆರೋಗ್ಯ ನೀಡುತ್ತದೆ. ಈ ಅಮೂಲ್ಯ ವೃಕ್ಷ ಸಂತತಿ ಬೇಕೆಂದರೆ ಸುಲಭವಾಗಿ ಸಿಗುವುದಿಲ್ಲ ಎಂದು ಮಗನಿಗೆ ಕಿವಿಮಾತು ಹೇಳಿದ್ದ. ಹೀಗಾಗಿ ಮರಗಳು ವಿಶಲವಾಗಿ ಬೆಳೆದು ನೆರಳು ಕೊಡುತ್ತಿದ್ದವು.

ಹಗಲಿರುಳೂ ಕುಬೇರನಾಗುವ ಕನಸು ಕಾಣುತ್ತಿದ್ದ ಮುತ್ತುಶೆಟ್ಟಿಯನ್ನು ಅವನ ಗೆಳೆಯರು ತಪ್ಪು ದಾರಿಗೆಳೆದರು. ಅಂಗೈಯಲ್ಲಿ ಬೆಣ್ಣೆ ಇಟ್ಕೊಂಡು ಯಾರಾದರೂ ತುಪ್ಪ ಹುಡುಕುತ್ತಾರಾ" ದೊರೆಗಳ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ. ಅಂದು ಉಡುಗೊರೆ ನೀಡಿದವರಿಗೆಲ್ಲಾ ದೊರೆ ಬಂಗಾರದ ನಾಣ್ಯಗಳನ್ನು ಬಾಚಿ ಬಾಚಿ ಕೊಡುತ್ತಾರೆ. ರತ್ನಗಂಧ ವೃಕ್ಷಗಳನ್ನು ಸುಮ್ಮನೆ ಇಟ್ಟುಕೊಂಡರೆ ದುಡ್ಡು ಬರುವುದಿಲ್ಲ ಮರಗಳನ್ನು ಕಡಿದು ಪೀಠೋಪಕರಣಗಳನ್ನು ಮಾಡಿಸಿ ದೊರೆಗೆ ಉಡುಗೊರೆ ನೀಡು. ಘಮಘಮ ಸುಗಂಧ ಬೀರುವ ಸಾಮಾಗ್ರಿಗಳನ್ನು ಕಂಡರೆ ದೊರೆಗೆ ಹರ್ಷವಾಗುತ್ತದೆ. ಮೂಟೆಗಟ್ಟಲೆ ಬಂಗಾರ ಕೊಡುತ್ತಾರೆ. ಅಪೂರ್ವವಾದ ಈ ವೃಕ್ಷಗಳ ಬೆಲೆ ದೊರೆಗಳಿಗೆ ಹೊತ್ತಿದೆ ಎಂದು ಕಿವಿಯೂದಿದರು.

ಬಂಗಾರ ಎನ್ನುವಾಗ ಶೆಟ್ಟಿಗೆ ನಾಲಗೆ ನೀರೂರುತು. ಆದರೆ ಈ ಮರಗಳನ್ನು ಕಡಿಯಬಾರದೆಂದು ಅಪ್ಪ ಹೇಳಿದ್ದಾರಲ್ಲ ಎಂದು ಆತಂಕಗೊಂಡ. ಗೆಳೆಯರು ನಕ್ಕುಬಿಟ್ಟರು. ಬರುತ್ತಿರುವುದು ಬಂಗಾರದ ನಾಣ್ಯಗಳು ಅಪ್ಪ ಹೇಳಿದ್ದಾರೆಂದು ಸುಮ್ಮನೆ ಕುಳೀತರೆ ಬಡವನಾಗಿಯೇ ಉಳಿಯುತ್ತಿ ಎಂದು ಮೂದಲಿಸಿದರು. ಶೆಟ್ಟಿ ಮರ ಕಡಿಯಲು ಮುಂದಾದಾಗ ಅವನ ತಾಯಿ ಅಡ್ಡ ಬಂದಳು. ಅಮೂಲ್ಯವಾದ ವೃಕ್ಷ ಸಂತತಿಯನ್ನು ಅಳಿಸಬಾರದೆಂದು ಯಾಚಿಸಿದಳು. ಆದರೆ ಯಾರ ಮಾತಿಗೂ ಕಿವಿಗೊಡದ ಮುತ್ತುಶೆಟ್ಟಿ ಮರಗಳನ್ನು ಕಡಿದುರುಳಿಸಿ, ಪೀಠೋಪಕರಣ ಗಳನ್ನು ಸಿದ್ದಗೊಳಿಸಿದ.

ಆ ಹೊತ್ತಿಗೆ ಶೆಟ್ಟಿಯ ಒಬ್ಬನೆ ಮಗನಿಗೆ ವಿಷದ ಹಾವು ಕಡಿಯಿತು. ಸಾವು ಬದುಕಿನೊಂದಿಗೆ ಹೋರಾಡುತ್ತಿದ್ದ ಅವನನ್ನು ಪರೀಕ್ಷಿಸಿದ ವೈದ್ಯರು ರತ್ನಗಂಧ ಎಂಬ ಅಪರೂಪದ ಮರದ ತೊಗಟೆಯನ್ನು ತಂದರೆ ಅದರಿಂದ ಔಷಧ ತಯಾರಿಸಿ ಇವನನ್ನು ಬದುಕಿಸಬಹುದು. ಆದರೆ ಇಂತಹ ಅಮೂಲ್ಯ ಮದ್ದು ಸಿಗುವುದು ತೀರ ಅನುಮಾನ ಎಂದರು.

ಹೀಗೆಂದರೆ ಹೇಗೆ ನನ್ನ ಮಗನನ್ನು ಏನಾದರೂ ಮಾಡಿ ಬದುಕಿಸಿ, ಕೈ ತುಂಬ ಹೊನ್ನು ಒಡುತ್ತೇನೆ ಎಂದ ಶೆಟ್ಟಿ. ವೈದ್ಯರಿಗೆ ನಗು ಬಂತು. ಗಿಡಗಳು ಮಾಡುವ ಕೆಲಸವನ್ನು ಹಣ ಮಾಡುವುದಿಲ್ಲಪ್ಪ ನನ್ನ ತೂಕದ ಬಂಗಾರ ಕೊಟ್ಟರೂ ಮೂಲಿಕೆಯಿಲ್ಲದೆ ವಿಷ ಇಳಿಯದು. ಹಣದಿಂದ ಪ್ರಾಣವನ್ನು ಕೊಂಡುಕೊಳ್ಳಲಾಗದು ಎಂದರು.

ಮುತ್ತುಶೆಟ್ಟಿ ತಲೆ ಮೇಲೆ ಕೈ ಹೊತ್ತು ಕುಳಿತ. ಧನದಾಹದಿಂದ ತನು ಕಡಿದು ಹಾಕಿದ ಮರವಿರುತ್ತಿದ್ದರೆ ತನ್ನ ಮಗ ಬದುಕಬಹುದಿತ್ತು. ತಾನೆಂತಹ ತಪ್ಪು ಮಾಡಿದೆ ಎಂದು ಅಳತೊಡಗಿದ. ಆಗ ಅದೇ ಮರದಿಂದ ತಯಾರಿಸಿದ ಒಂದು ಮಂಚವು ಮನುಷ್ಯ ಭಾಷೆಯಲ್ಲಿ ಅವನನ್ನು ಕರೆಯಿತು. ಅಯ್ಯಾ ನಿನ್ನ ತಂದೆ ನಮ್ಮನ್ನು ನೆಟ್ಟು ನೀರೆರೆದು ಗೊಬ್ಬರ ಹಾಕಿ ಬೆಳೆಸಿದರು. ನಾವು ಮರಗಳು ನೆಟ್ಟವನ ಋಣ ತೀರಿಸದೆ ಬಿಡುವುದಿಲ್ಲ. ಅದಕ್ಕಾಗಿ ನಿನಗೊಂದು ಉಪಕಾರ ಮಾಡುತ್ತೇನೆ. ನಮ್ಮ ತೊಗಟೆಯೂ ಸಿಗದಂತೆ ನೀನು ನಾಶ ಮಾಡಿರುವೆ. ಇದರ ಬದಲು ನಮ್ಮನ್ನು ಬೆಂಕಿಯಲ್ಲಿ ಸುಟ್ಟು ಅದರಿಂದ ಸಿಗುವ ಬೂದಿಯನ್ನು ನಿನ್ನ ಮಗನ ಮೈಗೆ ಲೇಪಿಸು. ನೀರಿನಲ್ಲಿ ಕದಡಿ ಕುಡಿಸು. ಅವನು ವಿಷದ ಪ್ರಭಾವದಿಂದ ಮುಕ್ತನಾಗಿ ಬದುಕುತ್ತಾನೆ ಎಂದಿತು.

ಮುತ್ತುಶೆಟ್ಟಿ ಹಾಗೆಯೆ ಮಾಡಿ ಮಗನ ಜೀವ ಉಳಿಸಿಕೊಂಡ. ಹಣದ ಆಸೆಗೆ ಸಸ್ಯಗಳ ಕುಲನಾಶ ಮಾಡ ಬಾರದು ಎಂಬ ನೀತಿಯನ್ನು ತಿಳಿದುಕೊಂಡು ತಾನೂ ತನ್ನ ತಂದೆಯಂತೆ ಅಮೂಲ್ಯ ಗಿಡಗಳನ್ನು ನೆಟ್ಟು ಬೆಳೆಸಿದ.

ಸಂಗ್ರಹ.

# ಬಾಂಧವ್ಯದ ಬುತ್ತಿ ನಮ್ಮ ನೆಲದ ಗತ್ತು



ಬದಲಾದ ಜಗತ್ತಿನಲ್ಲಿ ಆರ್ಥಿಕ ಲಾಭವಿಲ್ಲದೇ ಯಾವ ಕೆಲಸವೂ ಮಾಡಬಾರದು ಎನ್ನುವಂಥಹ ಮನಸ್ಥಿತಿ ಬಂದಿದೆ. ಒಂದು ಭಾರವಾದ ಚೀಲವನ್ನು ಎತ್ತಿ ತಲೆಯ ಮೇಲೆ ಇಡಲು, ಒಂದು ಲೇಖನ ಬರೆಯುವುದಾದರೆ, ವಯಸ್ಸಾದವರು ಪಕ್ಕದವರ ಬಳಿ ನಾಲ್ಕು ದಿನ ಏನೋ ತರಿಸಿಕೊಂಡರೆ ಸಮಯ ವ್ಯರ್ಥ, ನಮಗೇನು ಲಾಭ ಅನ್ನುವ ಮಾತು ಕೇಳಿಸುತ್ತದೆ. ಹೀಗೆ ಯಾವದ್ಯಾವುದಕ್ಕೋ ಹಣವೇ ಮುಖ್ಯ ಎಂದುಕೊಳ್ಳುವಾಗ ನಮ್ಮೂರಿನ ಮಾರುಕಟ್ಟೆಯಲ್ಲೊಬ್ಬ ಹಣಕ್ಕಿಂತ ಬಾಂಧವ್ಯ ಮುಖ್ಯ ಎಂದು ಸಾರಿದ್ದ.

ಆತ ಹಳ್ಳಿಯ ರೈತ. ಹಾಗಂತ ಅವನೇ ಎಲ್ಲ ಬೆಳೆ ಬೆಳೆದು ಮಾರುಕಟ್ಟೆಗೆ ತರುವವನೇನು ಅಲ್ಲ. ಬೇರೆ ರೈತರಿಂದಲೂ ತರಕಾರಿ ಖರೀದಿಸಿ ತಂದು ಸಂತೆಯಲ್ಲಿ ಮಾರುತ್ತಿದ್ದ. ಅವನ ಬಳಿ ಹೋಗಿ ನಿಂತರೆ ಬಹುತೇಕ ಎಲ್ಲ ತರಕಾರಿ ಸಿಗುತ್ತಿದ್ದವು. ಸಂತೆಯಲ್ಲಿ ಅವನ ಅಂಗಡಿಯ ಮುಂದೆ ಜನ ಜಮಾಯಿಸುವುದು ಹೆಚ್ಚು. ಎಂದಿನಂತೆ ಅಂದು ನಾನು ಅನವ ಮುಂದೆ ನಿಂತು ನನಗೆ ಬೇಕಾದ ತರಕಾರಿಗಳನ್ನೆಲ್ಲ ತೆಗೆದುಕೊಂಡೆ. ಲೆಕ್ಕಾಚಾರ ಮಾಡಿ ಹಣವೂ ಕೊಟ್ಟಾಯಿತು. ನಂತರ ಅಕ್ಕ ನಿಮ್ಮ ಚೀಲ ಮುಂದು ಮಾಡಿ ಎಂದ. ಅದೇನು ಹೊಸತಲ್ಲ. ತರಕಾರಿ ತರಲು ಹೋದಾಗಲ್ಲ ಹಾಗೆ ಹೇಳಿ ಒಂದು ಮುಷ್ಠಿ ಹಸಿಮೆಣಸಿನ ಕಾಯಿ ಹಣವಿಲ್ಲದೇ ಕೊಡುತ್ತಿದ್ದ. ಅದು ಅವನ ಖಾಯಂ ಗಿರಾಕಿಗಳಿಗೆ ಖುಷಿಯಿಂದ ಕೊಡುವ ರೀತಿ. ಆದರೆ ಇಂದು ಹರಿವೆ ಸೊಪ್ಪು, ಮೆಂತೆ ಸೊಪ್ಪು, ಈರುಳ್ಳಿ ಗಿಡದ ತಲಾ ಎರಡೆರಡು ಕಟ್ಟನ್ನು ಚೀಲಕ್ಕೆ ಹಾಕಿದ. ಕೇವಲ ನನಗೆ ಮಾತ್ರ ಹಾಕಿದನಾ ಎಂದು ನೋಡಿದರೆ ಅವನಿಗೆ ಮುಖ ಪರಿಚಯ ಮತ್ತು ಯಾವತ್ತೂ ಅವನಲ್ಲಿ ತರಕಾರಿ ಖರೀದಿಸುವವರಿಗೆಲ್ಲ ಕೈಗೆ ಬಂದಿದ್ದು ಖುಷಿಯಿಂದ ಕೊಡುತ್ತಿದ್ದ. ಹಣ ಪಡೆಯುತ್ತಿರಲಿಲ್ಲ . ಆಶ್ಚರ್ಯದಲ್ಲಿ ಯಾಕೆ ಹೀಗೆ ಕೊಡ್ತಿದ್ದಿಯಾ, ಹಣ ತೆಗೆದುಕೊಳ್ಳದೇ ಎಂದು ಕೇಳಿದ್ದಕ್ಕೆ ಅವನ ಉತ್ತರಕ್ಕೆ ಅಲ್ಲಿದ್ದವರು ಭಾವುಕರಾಗಿಬಿಟ್ಟರು. ನಾಳೆ ಯುಗಾದಿ ಅಲ್ಲಾ, ಹೊಸ ವರ್ಷ ಇದೆ. ನಿಮಗೆಲ್ಲ ಕೊಟ್ಟಿದ್ದು ನಮ್ಮಮ್ಮ ಕೈಯಾರೆ ಬೆಳೆಸಿದ ಗಿಡಗಳು. ಹಂಗೆ ಒಂಚೂರು ಹಂಚ್ಕೊಂಡು ತಿನ್ನೋಣ ಅಂತ. ಸ್ವಲ್ಪ ಸ್ವಾರ್ಥ ಎದೆ, ದಂಟುಗಳು ಚೂರು ಹೆಚ್ಚಿಗೆ ಬೆಳೆದು ಬಿಟ್ಟಿದೆ. ಬೆಳೆದದ್ದು ದುಡ್ಡಿಗೆ ಕೊಟ್ರೆ ತಪ್ಪಾಗುತ್ತೆ. ಹಾಗೆ ಒಗಿಲಿಕ್ಕೆ ಮನಸ್ಸಾಗ್ಲಿಲ್ಲ. ಅದ್ಕೆ ಒಂದು ಪಲ್ಯ ಮಾಡ್ಕೊಂಡು ತಿನ್ನಲಿ ಅಂತ ಹೀಗೆ ಕೊಡ್ತಿದ್ದೀನಿ ಅಂದ.



ಶುಭ ಗಿರಣಿಮನೆ
ಉಮ್ಮಚಗಿ,
ಯಲ್ಲಾಪುರ ತಾಲೂಕು
ಉತ್ತರಕನ್ನಡ ಜಿಲ್ಲೆ

ಬಂಡವಾಳವೇ ಮುಖ್ಯ ಅನ್ನುವವರಿಗೆ ಆತ ಮಾದರಿ ಎನ್ನಿಸಿದ. ಅವನು ರೈತ. ಮನೆಲಿ ದನಗಳಿರುತ್ತವೆ. ಅವುಗಳಿಗೆ ಮೇವು ಅಂತ ಹಾಕಬಹುದಿತ್ತು. ಆದರೂ ಹೀಗೆ ತನ್ನ ಇಷ್ಟದಿಂದ ಪ್ರೀತಿಯಿಂದ ಕೊಡುತ್ತಿರುವುದು ಕಂಡಾಗ ಇವತ್ತಿಗೂ ಬಾಂಧವ್ಯ ನಮ್ಮ ನೆಲದಲ್ಲಿ ಈ ರೀತಿಯಲ್ಲಿಯೂ ಇದೆ ಎಂದು ಕಂಡು ಸಂತೋಷ, ಆನಂದವಾಯ್ತು. ★

# ಏನ ಬೇಡಲಿ ನಿನ್ನ ಬಳಿ ಬಂದು। ಸ್ಮಶಾನದಲ್ಲಿ ನಿಂದು!

ಶ್ರೀ ಮಲ್ಲಿಕಾರ್ಜುನ ಎಸ್ ಬಿರಾದಾರ ಸೊನ್ನ

ಸ್ಮಶಾನದಲ್ಲಿ ಸತ್ತವರ ಅಂತ್ಯಸಂಸ್ಕಾರ ಮಾಡಲು ಬಂದವರ ಬಳಿ ಏನು ಬೇಡಬಹುದು? ಒಂದಷ್ಟು ಹಳೆಯ ಬಟ್ಟೆ, ದಕ್ಷಿಣೆ ಇತ್ಯಾದಿಗಳನ್ನಲ್ಲವೇ? ಆದರೆ ವಿಚಿತ್ರ ಬೇಡಿಕೆಯೊಂದನ್ನು ಮುಂದಿಡುತ್ತಿದ್ದ ವೈದ್ಯರೊಬ್ಬರ ನಿಜಜೀವನದ ಕತೆಯೊಂದು ಇಲ್ಲಿದೆ. ಅವರ ಹೆಸರು ಡಾಕ್ಟರ್ ಭಗವಾನ್ ದಾಸ್ ಕಾಲಿದಾಸ್ ಶೇಟ್ ಅವರ ಚಿಕಿತ್ಸಾಲಯ ಗುಜರಾತಿನ ಸಿದ್ದಪುರದಲ್ಲಿನ ಸರಸ್ವತಿ ನದಿ ತೀರದ ಸ್ಮಶಾನದ ಪಕ್ಕದಲ್ಲಿತ್ತು. ಅಲ್ಲಿಗೆ ಯಾವುದೇ ಹೆಣ ಅಂತ್ಯಕ್ರಿಯೆಗೆ ತರಲ್ಪಟ್ಟರೂ ತಕ್ಷಣ ವೈದ್ಯರು ಧಾವಿಸುತ್ತಿದ್ದರು.

ಸತ್ತವರ ಕುಟುಂಬದವರನ್ನು ಬೇಡಿಕೊಳ್ಳುತ್ತಿದ್ದರು. ಕೆಲವು ಕುಟುಂಬದವರು ನಮ್ಮ ಗೋಳು ಮನಗೇ ಹಾಸಿಹೊದ್ದುಕೊಳ್ಳುವಷ್ಟು ಇರುವಾಗ ನಿಮ್ಮದೇನು ವಿಚಿತ್ರ ಬೇಡಿಕೆ? ಇಲ್ಲಿಂದ ಎಂದು ಬೈಯುತ್ತಿದ್ದರು. ಜಗಳಕ್ಕಿಳಿಯುತ್ತಿದ್ದರು. ಹೊಡೆಯಲು ಕೈಯೆತ್ತುತ್ತಿದ್ದರು. ಆದರೆ ವೈದ್ಯರು ಇದಾವುದನ್ನೂ ಲೆಕ್ಕಿಸದೇ ಬೇಡುತ್ತಿದ್ದರು. ಬಹಳಷ್ಟು ಬಾರಿ ಬೇಡಿದುದನ್ನು ಸತ್ತು ಹೋದವರ ಕಣ್ಣುಗಳನ್ನು ಸತ್ತು ಹೋದವರ ಕುಟುಂಬದವರಿಗೆ ನೇತ್ರದಾನದ ಮಹತ್ವದ ಬಗ್ಗೆ ವಿವರಿಸುತ್ತಿದ್ದರು. ಆದರೆ ಕೆಲವರಿಗೆ ನೆತ್ರದಾನ ಮಾಡಿದವರು ಮುಂದಿನ ಜನ್ಮದಲ್ಲಿ ಕುರುಡರಾಗಿ ಹುಟ್ಟುತ್ತಾರೆಂಬ ಮೂಢನಂಬಿಕೆ ಇರುತ್ತಿತ್ತು.



ಅಂತವರು ಖಡಾಖಂಡಿತನಗಿ ನೇತ್ರದಾನ ಮಾಡಲು ನಿರ\ಅಕರಿಸುತ್ತಿದ್ದರು. ಆದರೆ ವೈದ್ಯರು ಬೇಡುವುದನ್ನು ಬಿಡುತ್ತಿರಲಿಲ್ಲ. ಹನ್ನೆರಡು ವರ್ಷಗಳ ಅವಧಿಯಲ್ಲಿ ಅವರು ಆರು ಸಾವಿರಕ್ಕೂ ಹೆಚ್ಚು ಬಾರಿ ಹೆಣಗಳ ನೇತ್ರದಾನ ಮಾಡಲು ಕೇಳಿಲೊಂಡಿದ್ದರು. ಸುಮಾರು ಮೂರು ಸಾವಿರ ಜೋಡಿ ನೇತ್ರಗಳನ್ನು ಪಡೆದೂ ಇದ್ದರು। ಹಾಗೆ ಪಡೆದ ನೇತ್ರಗಳನ್ನು ಸೂಕ್ತ ರೀತಿಯಲ್ಲಿ ಶೇಖರಿಸಿ, ಅಹಮದಾಬಾದಿನ ರೆಡ್-ಕ್ರಾಸ್ ಸಂಸ್ಥೆಗೆ ಉಚಿತವಾಗಿ ಕಳುಹಿಸುತ್ತಿದ್ದರು. ರೆಡ್ ಕ್ರಾಸ್ ಸಂಸ್ಥೆಯವರು ಆ ಕಣ್ಣುಗಳು ದೇಶಾದ್ಯಂತ ನೇತ್ರದಾನಕ್ಕಾಗಿ ಕಾಯುತ್ತಾ ಕುಳಿತವರಿಗೆ ಕಳುಹಿಸಿಕೊಡುತ್ತಿದ್ದರು. ನಮ್ಮೂರಿನಲ್ಲಿ ಸತ್ತವರ ಕಣ್ಣುಗಳು ಮತ್ತಾವುದೋ ಊರಿನ ಜನರಿಗೆ ಜಗತ್ತನ್ನು ನೋಡಲು ಸಹಾಯ ಮಾಡುತ್ತಿವೆ ಎಂಬುದೇ ದೊಡ್ಡ ಸಮಾಧಾನ। ಎಂದು ಡಾ. ಶೇಟ್ ಹೇಳುತ್ತಿದ್ದರು.

ಡಾ. ಶೇಟರ ಶ್ರೇಷ್ಠ ಕಾಯಕಕ್ಕೆ ಕಾರಣವಾದದ್ದು ಅವರ ಬದುಕಿನಲ್ಲೇ ನಡೆದ ಒಂದು ದುರಂತ. ಅವರ ಇಪ್ಪತ್ತೇಳು ವರ್ಷ ವಯಸ್ಸಿನ ಮಗ ದೀಪಕ್ ರಸ್ತೆ ಅಪಘಾತದಲ್ಲಿ ತೀರಿಕೊಂಡರು. ದೀಪಕ್ ಸಾಯುವ ಮುಂಚೆ ತನ್ನ ಕಣ್ಣುಗಳನ್ನು ದಾನ ಮಾಡಬೇಕೆಂದು ಬೇಡಿಕೊಂಡು ಸತ್ತರಂತೆ. ಡಾ. ಶೇಟ್ ಆತನ ಅಚಿತಿಮ ಬೇಡಿಕೆಯನ್ನು ಈಡೇರಿಸಿದರು. ಆತನ ಕಣ್ಣುಗಳನ್ನು ದನ ಮಾಡಿದರು. ನಂತರ ಅವರು ದೀಪಕ್ ಚಕ್ಷು ಕುಟೀರ ಎಂಬ ಹೆಸರಿನಲ್ಲಿ ಒಂದು ಚಿಕಿತ್ಸಾಲಯವನ್ನು ಪ್ರಾರಂಭಿಸಿದರು. ಇವರದ್ದು ಹುಚ್ಚಾಟವೆಂದು ಊರವರೆಲ್ಲಾ ನಕ್ಕರೂ, ತಿರಸ್ಕರಿಸಿದರೂ ತಲೆ ಕೆಡಿಸಿಕೊಳ್ಳದೆ ತಮ್ಮ ಕಯಕವನ್ನು ಮುಂದುವರೆಸಿದರು. ಅವರ ಬದ್ಧತೆ ಎಷ್ಟು ತೀವ್ರವಗಿತ್ತೆಂದರೆ ಅವರ ಎರಡನೆಯ ಮಗನ ಮದುವೆಯ ಶುಭದಿನದಂದೂ ಅವರು ಸ್ಮಶಾನಕ್ಕೆ ಹೋಗಿದ್ದರು.

ಎರಡು ಜೋಡಿ ನೇತ್ರಗಳನ್ನು ದಾನ ನಡೆದಿದ್ದರು. ಅವುಗಳನ್ನು ರೆಡ್‌ಕ್ರಾಸ್ ಸಂಸ್ಥೆಗೆ ಕಳುಹಿಸಿದ್ದರು. ಆನಂತರ ಏನೂ ಆಗಿಲ್ಲವೋ ಏನೋ ಎಂಬಂತೆ ಮದುವೆಯ ಸಮಾರಂಭದಲ್ಲಿ ಭಾಗವಹಿಸಿದ್ದರು. ಡಾ. ಶೇಟ್ ತಮ್ಮ ಬದುಕಿನ ದುರಂತಸನ್ನಿವೇಶದಲ್ಲಿ ಅಳುತ್ತಾ ಕೂರಲಿಲ್ಲ. ಅದರ ಬದಲು ಉದಾತ್ತ ಸೇವೆಯನ್ನು ಕೈಗೆತ್ತಿಕೊಂಡರು. ನಾನು ಬೇಡಿ ಪಡೆದಿರುವ ಮೂರು ಸಾವಿರಕ್ಕೂ ಹೆಚ್ಚು ಕಣ್ಣುಗಳು ಹಿಂದುಗಳದ್ದೋ ಮುಸಲ್ಮಾನರದ್ದೋ, ಜೈನರದ್ದೋ ಯಾರದ್ದೋ ಗೊತ್ತಿಲ್ಲ। ಆದರೆ ನನಗೆ ಎಲಾ ಕಣ್ಣುಗಳೂಒಂದೇ ಬಗೆಯಾಗಿಕಾಣಿಸುತ್ತವೆ ಎಂಬ ಡಾ.ಶೇಟರಮಾತಯ ಗಮನರ್ಹ ಅಲ್ಲವೇ? ಹಗೆಯೆ ಅವರಂತಹ ಮಹಾಪುರುಷರು ಪತ್ರಿಯೊಂದು ಊರಿನಲ್ಲೂ ಇದ್ದು ಈ ಒಳ್ಳೆಯದಲ್ಲವೇ? ನಮಗೂ ಇಂತಹದ್ದೊಂದು ಕಾಯಕವಿದ್ದರೆ ಇನ್ನೂ ಒಳ್ಳೆಯದಲ್ಲವೇ?. ★

# ಮಮತೆಯ ಸ್ಪರ್ಶ



ಡಾ. ಶಶಿಕಿರಣ್ ಶೆಟ್ಟಿ
ಹೋಂ ಡಾಕ್ಟರ್ ಫೌಂಡೇಶನ್

ಒಬ್ಬ ಶಿಕ್ಷಕಿಯ ಮಾತಿನಿಂದ...

ಶ್ರೀಮತಿ ಸರಳಾ ಟೀಚರ್ ಇಂಗ್ಲೀಷ್ ಟೀಚರ್ ಇವರು...

ಇವರು ಕ್ಲಾಸ್ ರೂಮಿಗೆ ಬಂದ ಕೂಡಲೇ, ಮಕ್ಕಳು...

Good morning madam... ಹೇಳುತ್ತಲೇ ಇವರು...

love you all ಎಂದು ಹಾರೈಕೆಯ wish ಮಾಡಿ ಪಾಠ ಶುರು ಮಾಡುವರು...

ಅವರಿಗೆ ಒಮ್ಮೊಮ್ಮೆ ಅನಿಸುತಿತ್ತು, ಮಕ್ಕಳೇನೋ ತುಂಬ ಹೃದಯದಿಂದ wish ಮಾಡುತ್ತಾರೆ.... ಆದರೆ ನಾನು ನಿಜವಾಗಿಯೂ... love you all ಅನ್ನುತ್ತೇನೆಯೇ?....

ನಾನು ಮಕ್ಕಳನ್ನು ಪ್ರೀತಿಸುತ್ತಿದ್ದೇನೆಯಾ?

ಹೌದು... ಸರಳಾ ಮೇಡಂ ಎಲ್ಲ ಮಕ್ಕಳನ್ನೂ ಒಂದೇ ತರಹ ನೋಡುತ್ತಿದ್ದಿಲ್ಲ.

ಏಕೆಂದರೆ ಕೊನೆಯ ಬೆಂಚಿನ ಹುಡುಗ....ಶೈಲೇಶ್ ಯಾವ ತರಹದ ಅಭಿರುಚಿ ತೋರುತ್ತಿರಲಿಲ್ಲ ಅಭ್ಯಾಸದಲ್ಲಿ, ನೋಡಲು ಅಸಹ್ಯ, ಕೊಳಕು ಬಟ್ಟೆ, ಮಾತೂ ಆಡುವುದಿಲ್ಲ, ಎಷ್ಟು ಹೊಡೆದರೂ, ಸುಮ್ಮನೆ ಕೂಡುವನು. ಯಾವ ತರಹದ ಪ್ರತ್ಯುತ್ತರವೂ ಇಲ್ಲ..., ಇವನೆಂತಹ ದಡ್ಡ ಹುಡುಗ?... ಎಂದು ಸರಳಾ ಮೇಡಂ ಆ ಹುಡುಗನ ಗೋಜಿಗೂ ಹೋಗುತ್ತಿರಲಿಲ್ಲ.

ಪಾಠದಲ್ಲಿ ಯಾವುದಾದರೂ ನಕಾರಾತ್ಮಕ ವಿಷಯ ಬಂತೆಂದರೆ, ಸರಳಾ ಮೇಡಂ ಶೈಲೇಶನ ಉದಾಹರಣೆ ಕೊಡುವರು. ಮತ್ತೇ ಯಾವುದಾದ್ರೂ ಸಕಾರಾತ್ಮಕ ವಿಷಯ ಬಂತೆಂದರೆ, ಅವನನ್ನು ನಿರ್ಲಕ್ಷ್ಯ ಮಾಡುತ್ತಿದ್ದರು.

ಹೀಗೆಯೇ ದಿನಗಳು ಉರಳಿದವು....ಸಹ ಶಿಕ್ಷಕರು ಕೇಳಿದರೆ...

ಓಹೋ ಅವನಾ, ಶೈಲೇಶ್... ಅವನಿಗೆ ಪಾಠಮಾಡುವುದೇ ಒಂದೇ, ಬೋರಲು ಕೊಡದ ಮೇಲೆ ನೀರು ಸುರಿಯುವುದು ಒಂದೇ....ಹೀಗೆ ಅವನ ಬಗ್ಗೆ ಅಪಹಾಸ್ಯ ಮಾಡುತ್ತಿದ್ದರು. ಮುಂದೆ ತ್ರೈಮಾಸಿಕಪರೀಕ್ಷೆ ಬಂತು... ಯಥಾ ಪ್ರಕಾರ, ಶೈಲೇಶ್ ಫೇಲ್... ಆರು ತಿಂಗಳ ಪರೀಕ್ಷೆಯಲ್ಲಿಯೂ ಶೈಲೇಶ್ fail ಅವನ progress card ಅವನ ಕೈಗೆ ಕೊಟ್ಟು, parents signsture ಮಾಡಿಸಿ ತಂದು ಕೊಡಲು ಸರಳಾ ಮೇಡಂ ಶೈಲೇಶ್‌ನ ಕೈಗೆ ಅವನ progress card ಕೊಟ್ಟರು.

ಕೆಲವು ದಿನಗಳ ನಂತರ ಅವನು ತನ್ನ progress card, ಸರಳಾ ಮೇಡಂಗೆ ವಾಪಸ್ಸು ಮಾಡಿದ, ಅವರು ಅದನ್ನು ತೆರೆದು ನೋಡುವ ಗೋಜಿಗೂ ಹೋಗಲಿಲ್ಲ....

ಮುಂದೆ ಒಮ್ಮೆ head ಮಾಸ್ಟರ್ ಚೇಂಬರ್‌ನಲ್ಲಿ ಎಲ್ಲ class teachers meeting ಆಗಿ, hm ಎಲ್ಲ classಗಳ progress review ಮಾಡಲಾಗಿ, ಸರಳಾ ಮೇಡಂ ಅವರ ಕ್ಲಾಸ್ ವಿಷಯ ಬಂತು, ಆಗ ಶೈಲೇಶನ ಬಗ್ಗೆ ಚರ್ಚೆಯೂ ಆಯಿತು. ಶೈಲೇಶನ ಪ್ರೊಗ್ರೇಸ್ ಕಾರ್ಡ್ ನೋಡಿ ಹೆಚ್‌ಎಂ ಗಾಬರಿ ಆದರು.

ಕೂಡಲೇ ಅವನ ಹಿಂದಿನ ವರ್ಷಗಳ ಪ್ರೊಗ್ರೇಸ್ ಕಾರ್ಡು ತೆಗೆದು ನೋಡಲು, ಅವರಿಗೆ ಆಶ್ಚರ್ಯವಾಯಿತು, ಅವನ ಹಿಂದಿನ ಎಲ್ಲ ಕ್ಲಾಸ್‌ಗಳಲ್ಲಿ ಟಾಪ್ ರಾಂಕ್ ವಿದ್ಯಾರ್ಥಿ...

ಶೈಲೇಶಗೆ ತಮ್ಮ ಚೆಂಬರ್‌ಗೆ ಕರೆದು ಸ್ವತಃ ವಿಚಾರಿಸಿದರು. ಆಗ ಗೊತ್ತಾಯಿತು, ಅವನ ತಾಯಿಗೆ ಕ್ಯಾನ್ಸರ್ ರೋಗ ಇದೆ, ಅವಳ ಲಾಸ್ಟ್ stage ನಲ್ಲಿದ್ದಾಳೆ ಅಂತ...

ಶೈಲೇಶನ ತಾಯಿ ಈಗ ಶೈಲೇಶನ ಕಡೆ ಅಷ್ಟು ಲಕ್ಷ್ಯ ಕೊಡುವುದರಲ್ಲಿ ಅಸಮರ್ಥಳು....

ಶೈಲೇಶನ ಕೆಲಸ ಈಗ ತಾಯಿಯ ಸೇವೆಯಲ್ಲಿ ಅಭ್ಯಾಸದ ಕಡೆ ಲಕ್ಷ ಕಡಿಮೆ ಆಗಿ, ಅವನು fail ಆಗ್ತಿದ್ದಾನೆ.

ಸರಳಾ ಮೇಡಂ ಗೆ ಈಗ ಅರ್ಥವಾಯಿತು.

ಓಹೋ ನಾನು ಇಲ್ಲಿಯ ತನಕ ಕಾಟಾಚಾರದ ಹಾರೈಕೆಯ love you all... ಅಂತಾ ಹೇಳುತಿದ್ದೆ.

ನಾಳೆಯಿಂದ

Love you all ...... my students...

ಇದು ಅವರ ಮನದಾಳದಿಂದ ಬರಹತ್ತಿತ್ತು.

ಈಗ ಅವರು ಶೈಲೇಶ್‌ನ ಕಡೆ ನೋಡುವ ದೃಷ್ಟಿಕೋನ ಬದಲಾಯಿತು. ಅವರು ಶೈಲೇಶ್‌ನ ಜೊತೆ ಸಕಾರಾತ್ಮಕ ಧೋರಣೆ ತೋರಿಸಲು ಶುರು ಮಾಡಿದರು.

ಹೀಗೇ ಸರಳಾ ಮೇಡಂ ಅವರ ಮನಸ್ಸು ಪರಿವರ್ತನೆ ಆಗಿ, ಕೆಲವೇ ತಿಂಗಳ ನಂತರ, ವಾರ್ಷಿಕ ಪರೀಕ್ಷೆ ಬಂತು.

ರಿಸಲ್ಟ್ ಕೂಡಾ ಬಂತು.

ಮತ್ತೇ ಶೈಲೇಶ್ class ನಲ್ಲಿ topper

ಅವನಿಗಿಂತ ಹೆಚ್ಚು ಸಂತೋಷ ಆದಿದ್ದು ಸರಳಾ ಮೇಡಂಗೆ

ಒಬ್ಬ ಶಿಕ್ಷಕಿ, ಅಂತಃ ಕರಣ ತೋರಿಸಿ ಪಾಠ ಮಾಡಿದರೆ ಏನೆಲ್ಲಾ ಚಮತ್ಕಾರ ಮಾಡಬಹುದು, ಇದಕ್ಕೆ ಸರಳಾ ಮೇಡಂ ಅಂತಹ teacher ಮತ್ತು ಶೈಲೇಸ್ ನಂತಹ student ಮಾದರಿಯಾದರು.

SSLC ವಿದ್ಯಾಭ್ಯಾಸ ಮುಗಿದು, ಮಕ್ಕಳು school ಬಿಟ್ಟು ಹೋಗ್ತಾರೆ ಎಂದು ಆ ದಿನ ಶಾಲೆಯಲ್ಲಿ ಮಕ್ಕಳಿಗೋಸ್ಕರ ಒಂದು send off party ಇಟ್ಟು ಕೊಂಡಿದ್ದರು.

ಪಾರ್ಟಿ ಮುಗಿಯಿತು. ಎಲ್ಲರ ಭಾಷಣ ಕೂಡ ಆದವು ಕೊನೆಯಲ್ಲಿ ಮಕ್ಕಳು ತಮ್ಮ ತಮ್ಮ ಇಚ್ಛೆ ಅನುಸಾರ teacher ಗೆ ಏನೇನೋ ಗಿಫ್ಟ್ ಕೊಟ್ಟರು. ಕೆಲವರು ಪೆನ್ ಕೊಟ್ಟರೆ ಇನ್ನೂ ಕೆಲವರು ಏನೇನೋ ತಮಗೆ ತಿಳಿದಂತೆ ಗಿಫ್ಟ್ ಕೊಟ್ಟರು. HM ಗೆ ಒಂದು costly vanity bag ಕೊಟ್ಟರು.

ಶೈಲೇಶ್ ನಿಧಾನ ಗತಿಯಿಂದ stage ಮೇಲೆ ಬಂದು ಸರಳಾ ಮೇಡಂಗೆ ನಾಲ್ಕು gold polish ಮಾಡಿದ ಬಳೆಗಳನ್ನು ಗಿಫ್ಟ್ ಆಗಿ ಕೊಟ್ಟು ನಮಸ್ಕಾರ ಮಾಡಿದನು.

ಸರಳಾ ಮೇಡಂ ಆ ಬಳೆಗಳ ಕಡೆ ನೋಡಿದರು. ಏನೂ ಯೋಚಿಸದೆ ಆ ಹಿತ್ತಾಳೆಯ ಬಳೆಗಳನ್ನು ತಮ್ಮ ಕೈಗೆ ಹಾಕಿಕೊಂಡರು.

ಈಗ ಶೈಲೇಶ್ ನ ಮುಖದಲ್ಲಿ ಮಂದಹಾಸ ಮೂಡಿತು. ಸಣ್ಣದಾಗಿ ಮುಗುಳ್ನಗೆ ಅವನ ಮುಖದ ಮೇಲೆ ಹರಿದಾಡಿತು.

ಅವನ ಬಾಯಿಂದ ಈ ಮಾತುಗಳು

“ಮೇಡಂ, ಈಗ ನೀವು ನನ್ನ ತಾಯಿಯ ಹಾಗೆ, ಅವಳೇನೂ ನನ್ನ ಬಿಟ್ಟು ಹೋದಳು, ಇವು ಅವಳು ಉಪಯೋಗ ಮಾಡುತ್ತಿದ್ದ ಅತೀ ಅಚ್ಚು ಮೆಚ್ಚಿನ ಬಳೆಗಳು.

ಇವು ಅವಳು ಸಾಯುವ ಮುನ್ನ ಧರಿಸಿದ ಬಳೆಗಳು”

ಸರಳಾ ಮೇಡಂ ಮತ್ತು ಇನ್ನಿತರ ಶಿಕ್ಷಕರ ಕಣ್ಣುಗಳಿಂದ ಒಂದೇ ಸಮನೆ ನೀರು ಕಪಾಳದ ಕೆಳಗೆ ಹರಿಯುತ್ತಿದ್ದವು.

ವರ್ಷಗಳು ಉರುಳಿದವು....

ಸರಳಾ ಮೇಡಂ, ಇನ್ನು ಮುಂದೆ

Love you all ಅಂತ ತುಂಬಾನೇ ಶ್ರದ್ಧೆಯಿಂದ, ಪ್ರೀತಿಯಿಂದ serious ಆಗಿ ಹೇಳಲು ಶುರು ಮಾಡಿದರು...

ಮುಂದೆ ಅವರೂ retire ಆಗಿ, ಮನೆಯ ಕೆಲಸದಲ್ಲಿ busy ಆದರು.

ಅಚಾನಕ್ಕಾಗಿ ಒಂದು ದಿನ, ಅವರಿಗೆ ಒಂದು ಪತ್ರ ಬಂದಿತು...

ಪತ್ರ ನೋಡುತ್ತಾರೆ, ಯಾರದು ಇರಬಹುದು?

Sender’s address ನೋಡ್ತಾರೆ...

From<br>
Dr. Shailesh<br>
MD, FRCP (London)

ಓಹ್... ಸರಳ ಮೇಡಂ... ಗತ ಕಾಲದ ಜೀವನಕ್ಕೆ ಹೋದರು...

ಓಹೋ... ಅವನೇ ಶೈಲೇಶ್... ಬಳೆ ಗಿಫ್ಟ್ ಕೊಟ್ಟವನು...

ಪತ್ರ ಬಿಚ್ಚಿ ಓದುತ್ತಾರೆ...

ಆತ್ಮೀಯ ಸರಳ ಮೇಡಂ

ನನಗೆ ಈವರೆಗೆ ಜಗತ್ತಿನಲ್ಲಿ ಭೇಟಿ ಆದ ಮನುಷ್ಯರಲ್ಲಿ ನೀವು ಅತೀ ಉತ್ತಮರು...

ನನ್ನ ಮದುವೆ fix ಆಗಿದೆ. ಹುಡುಗಿಯೂ ಡಾಕ್ಟರ್......

ನೀವಿಲ್ಲದಿದ್ದರೆ ಈ ಮದುವೆ ನಡೆಯದು......

ಈ ಪತ್ರದ ಜೊತೆ, return ticket ಜೊತೆ 2 ಟಿಕೆಟ್ಸ್ Londonಗೆ ಕಳಿಸುತ್ತಾ ಇದ್ದೇನೆ ready ಆಗಿ, ಇನ್ನೂ time ಇದೆ. Visa ಬಗ್ಗೆ ಟೆನ್ಷನ್ ಬೇಡ, ಅದೆಲ್ಲ ನಾನು ನೋಡಿ ಕೊಳ್ಳುತ್ತೇನೆ.

ಆಗುವುದಿಲ್ಲ ಎನ್ನಬೇಡಿ

ನಿಮ್ಮ ದಾರಿ ಕಾಯುವ

ಶೈಲೇಶ್......

ಸರಳಾ ಮೇಡಂ ಕಡೆ ಅವನು ಕೊಟ್ಟ ಆ ಬಳೆಗಳು ಇನ್ನೂ ಜೋಪಾನವಾಗಿ ಇವೆ.

ಈಗ ಸರಳಾ ಮೇಡಂ, ತಮ್ಮ ಇಳಿ ವಯಸ್ಸಿನಲ್ಲೂ Londonಗೆ ಪ್ರಯಾಣ ಬೆಳೆಸಿದರು. ಮನೆಯವರೆಲ್ಲ ಬೇಡ ಅಂದರೂ ಕೇಳಲಿಲ್ಲ...

London ಊರು ತಲುಪಿದರು. Maariage ಹಾಲ್‌ಗೆ ಕೂಡ ಹೋದರು, ಮೊದಲೇ ಅವರು ಇಂಗ್ಲಿಷ್ teacher ಹೀಗಾಗಿ ಭಾಷೆಯ problem ಏನೂ ಆಗಲಿಲ್ಲ...

Fucation hallನಲ್ಲಿ ಹೋಗಿ ಕೊನೆಯ ಸಾಲಿನಲ್ಲಿ ಕುಳಿತರು, ಹೊಸ ಊರು, ಹೊಸ ದೇಶ, ಹೊಸ ಜನರು, ಯಾರದೂ ಪರಿಚಯ ಇಲ್ಲ. ಶೈಲೇಶನ ಮುಖ ಕೂಡ ಅಷ್ಟು ಜ್ಞಾಪಕ ಇಲ್ಲ.

ಸುಮ್ಮನೆ ಒಂದು ಮೂಲೆಯಲ್ಲಿ ಕುಳಿತರು. ಅಷ್ಟರಲ್ಲಿ ಯಾರೋ ಇವರನ್ನು ಹುಡುಕಿಕೊಂಡು ಬಂದು...

Are you Sarala madam... teacher...?
ಎಂದು ಕೇಳಲು

Yes, Yes,. I am Mrs Sarala...
From india...

ಕೂಡಲೇ ಆ ಯುವಕ ಅವರ ಕೈ ಹಿಡಿದು ಮುಂದಿನ line ನಲ್ಲಿ ಕರೆದುಕೊಂಡು ಹೋದ

ಅಲ್ಲಿ ಒಂದು ಸುಖಾಸೀನದ ಮೇಲೆ ಕೂಡಿಸಿದ. ಅದರ ಹಿಂದೆ ಹೀಗೆಂದು ಬರೆದಿತ್ತು...

My mother...... my loving mother....

ಇವರನ್ನು ನೋಡಿ ಆ marriage hallನಲ್ಲಿಯ ಪ್ರತಿಯೊಬ್ಬರೂ ಇವರ ಪಾದ ಮುಟ್ಟಿ ನಮಸ್ಕಾರ ಮಾಡಿದರು.

ಅಷ್ಟರಲ್ಲಿ ಶೈಲೇಶ್ ತನ್ನ ಪತ್ನಿ ಮತ್ತು ಅವರ ಪರಿವಾರದ ಸಮೇತ ಸರಳಾ ಮೇಡಂ ಇದ್ದ ಕಡೆ ಬಂದು, ಅವರ ಎರಡೂ ಕಾಲು ಮುಟ್ಟಿ ನಮಸ್ಕಾರ ಮಾಡುತ್ತಾ ಪತ್ನಿಗೆ ಹೇಳಿದ...

ಇವರು ನನ್ನ ಜೀವನದಲ್ಲಿ ನನ್ನ ತಾಯೀ ನಂತರ ಆ ಸ್ಥಾನವನ್ನು ತುಂಬಿದವರು...

ಇಂದು ನಾನು ಏನು ಇರುವೆನೋ ಅದಕ್ಕೆಲ್ಲ ಸ್ಫೂರ್ತಿ ತುಂಬಿದವರು ಇವರೇ.

ನನ್ನ ಸರಳಾ ಮೇಡಂ, ನನ್ನ ಅಮ್ಮ...

ಅದಕ್ಕೆ ಸರಳಾ ಮೇಡಂ ಅವರ ಮಾರ್ಮಿಕ ಉತ್ತರ ಕೇಳಿ...

ಇಲ್ಲ, ಇಲ್ಲ ಅಂದು ಶೈಲೇಶ್ ನನ್ನ ವರ್ಗದಲ್ಲಿ ಇರದೇ ಹೋದ ಪಕ್ಷದಲ್ಲಿ ನನಗೆ ಗೊತ್ತೇ ಆಗುತ್ತಿರಲಿಲ್ಲ. ಶಿಕ್ಷಕಿ ಮೊದಲು ಪ್ರತೀ ವಿದ್ಯಾರ್ಥಿಯ ತಾಯೀ ಆಗಬೇಕು. ಆ ನಂತರ ಶಿಕ್ಷಕಿ.

ಎಷ್ಟೊಂದು ಅರ್ಥಗರ್ಭಿತ ಮಾತು

★

# ಅಭಿನವ ಸರಿಗಮಪ ಅನಂತ ಸಂಗೀತ ಯಾನ-2026

ಮಂಡ್ಯ ಜಿಲ್ಲೆ ಎಂದರೆ ಕೇವಲ ಕೃಷಿ, ಸಾಹಿತ್ಯ ಮತ್ತು ಜನಪದ ಕಲೆಯ ನೆಲ ಮಾತ್ರವಲ್ಲ. ಅನೇಕ ಅದ್ಭುತ ಸಂಗೀತ ಪ್ರತಿಭೆಗಳ ತವರೂರು ಹೌದು. ಇಂತಹ ಗ್ರಾಮೀಣ ಭಾಗದ ಗಾಯನ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಒದಗಿಸುವ ಉದ್ದೇಶದಿಂದ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ "ಅಭಿನವ ಸರಿಗಮಪ ಅನಂತ ಸಂಗೀತ ಯಾನ 2026" ಕಾರ್ಯಕ್ರಮವು ಮಂಡ್ಯ ಜಿಲ್ಲೆಯ ಸಂಗೀತಲೋಕದಲ್ಲಿ ಹೊಸ ಅಧ್ಯಾಯವನ್ನೇ ನಿರ್ಮಿಸಿದೆ.

ನಗರದ ಗಾಂಧಿ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆ ಸಾಮಾನ್ಯ ಸ್ಪರ್ಧೆಯಷ್ಟೇ ಅಲ್ಲ. ಗ್ರಾಮೀಣ ಯುವ ಪ್ರತಿಭೆಗಳ ಕನಸುಗಳಿಗೆ ರಂಗೇರಿಸಿದ ಸಂಗೀತ ಹಬ್ಬವಾಗಿತ್ತು. ನೈಜವಾದ್ಯಗಳೊಂದಿಗೆ ರಿಯಾಲಿಟಿ ಶೋ ಮಾದರಿಯಲ್ಲಿ ಆಯೋಜಿಸಲಾದ ಈ ಸ್ಪರ್ಧೆ ಮಂಡ್ಯ ಜಿಲ್ಲೆಯಲ್ಲೇ ವಿಶಿಷ್ಟತೆಯನ್ನು ಪಡೆದುಕೊಂಡಿತು. ಸ್ಪರ್ಧೆಯ ಪ್ರತಿಯೊಂದು ಹಂತವೂ ಶಿಸ್ತಿನೊಂದಿಗೆ ವೃತ್ತಿಪರತೆಯಿಂದ ಹಾಗೂ ಕಲಾತ್ಮಕತೆಯಿಂದ ನಡೆದಿದ್ದು ಪ್ರೇಕ್ಷಕರ ಮನಸೆಳೆದಿತು.






ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಶಿವಮೂರ್ತಿ ಕೀಲಾರ ಅವರು "ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಅವಕಾಶ ಸಿಕ್ಕರೆ ಅವರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲೂ ಸಾಧನೆ ಮಾಡಬಲ್ಲರು" ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಮಂಡ್ಯದ ಅನೇಕ ಕಲಾವಿದರು ಈಗಾಗಲೇ ಅಕ್ಕ ಸಮ್ಮೇಳನ ಸೇರಿದಂತೆ ಹಲವು ವೇದಿಕೆಗಳಲ್ಲಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿರುವುದನ್ನು ಉಲ್ಲೇಖಿಸಿ, ಇಂತಹ ಕಾರ್ಯಕ್ರಮಗಳು ಪ್ರತಿಭೆಗಳ ಭವಿಷ್ಯ ನಿರ್ಮಾಣಕ್ಕೆ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಈ ಸ್ಪರ್ಧೆಗೆ ಜಿಲ್ಲೆಯ ವಿವಿಧ ಭಾಗಗಳಿಂದ ಸುಮಾರು 120 ಗಾಯಕ ಭಾಗವಹಿಸಿದ್ದು ವಿಶೇಷವಾಗಿತ್ತು. ಆಡಿಷನ್ ಮೂಲಕ ಆಯ್ಕೆಯಾದ 40 ಮಂದಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆದರು. ಬಳಿಕ ನಡೆದ ಸೆಮಿ ಫೈನಲ್‌ನಲ್ಲಿ ಜೂನಿಯರ್ ವಿಭಾಗದ 23 ಮಂಧಿ ಮತ್ತು ಸೀನಿಯರ್ ವಿಭಾಗದ 17 ಮಂದಿ ತಮ್ಮ ಅದ್ಭುತ ಗಾಯನ ಕೌಶಲ್ಯ ಪ್ರದರ್ಶಿಸಿದರು. ಅಂತಿಮವಾಗಿ ನಡೆದ ಫೈನಲ್ ಸ್ಪರ್ಧೆಯಲ್ಲಿ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಿಂದ ತಲಾ ನಾಲ್ಕು ಮಂದಿಯನ್ನು ಆಯ್ಕೆ ಮಾಡಿ ವಿಜೇತರನ್ನು ಘೋಷಿಸಲಾಯಿತು.

ಜೂನಿಯರ್ ವಿಭಾಗದಲ್ಲಿ ವಿಷ್ಣುವಿಜಯ್ ಪ್ರಥಮ ಸ್ಥಾನ ಪಡೆದು ಗಮನ ಸೆಳೆದರೆ, ವಂದನಾ ಗೌಡ ದ್ವಿತೀಯ ಹಾಗೂ ತನ್ವಿ ಸಿ ತೃತೀಯ ಸ್ಥಾನ ಗಳಿಸಿದರು. ಸೆಮಿ ಫೈನಲ್ ಹಂತದಲ್ಲಿ ಗಹನ್ ಗೌಡ, ತ್ರಿಶುಲ್ ಮಡಿವಾಳ್, ನಿಸರ್ಗ, ಪರಿಣಿತ ಮಂಜಣ್ಣ, ಕರಣ್ ವೀರ್ ಉತ್ತಮ ಗಾಯನದ ಮೂಲಕ ಪ್ರೇಕ್ಷಕರ ಮೆಚ್ಚುಗೆ ಪಡೆದರು. ವಿಶೇಷ ಸ್ಪರ್ಧಿಯಾಗಿ ಭಾಗವಹಿಸಿದ್ದ ರಿಯಾ ಜಿ ಅವರೂ ತಮ್ಮ ಪ್ರತಿಭೆಯಿಂದ ಎಲ್ಲರ ಗಮನ ಸೆಳೆದರು.

ಸೀನಿಯರ್ ವಿಭಾಗದಲ್ಲಿ ನವೀನ್ ಕುಮಾರ್ ಜಿ ಜಿ ಪ್ರಥಮ ಸ್ಥಾನ ಪಡೆದು ಗಮನ ಸೆಳೆದರೆ, ರೋಹನ್ ಟಿ ಎಸ್ ದ್ವಿತೀಯ ಹಾಗೂ ಶಂಕರ್ ತೃತೀಯ ಸ್ಥಾನ ಗಳಿಸಿದರು. ಸೆಮಿ ಫೈನಲ್ ಹಂತದಲ್ಲಿ ಮನೀಸ್, ವಿಶ್ವಾಸ್, ಹಂಸ,







ಸೌಭಾಗ್ಯ ಶಿವಲಿಂಗೇಗೌಡ, ಸತೀಸ್ ಕೆ. ಎಸ್ ಉತ್ತಮ ಗಾಯನದ ಮೂಲಕ ಪ್ರೇಕ್ಷಕರ ಮೆಚ್ಚುಗೆ ಪಡೆದರು.

ಕಾರ್ಯಕ್ರಮದ ಮತ್ತೊಂದು ವಿಶೇಷತೆ ಎಂದರೆ, ಖ್ಯಾತ ಸಂಗೀತ ಕ್ಷೇತ್ರದ ತಜ್ಞರು ತೀರ್ಪುಗಾರರಾಗಿ ಭಾಗವಹಿಸಿದ್ದದ್ದು, ಜೀ ಕನ್ನಡ ಸರಿಗಮಪ ಖ್ಯಾತಿಯ ಹಿನ್ನೆಲೆ ಗಾಯಕಿ ರಮ್ಯಾ ಹಾಗೂ ಅಂತಾರಾಷ್ಟ್ರೀಯ



ಗಾಯಕಿ ಸಿಮಾ ರಾಯ್ಕರ್ ಹಾಗೂ ಡೇವಿಡ್ ಪ್ರತಿಭಾಂಜಲಿ ಯವರು ಸ್ಪರ್ಧಿಗಳ ಗಾಯನವನ್ನು ಮೌಲ್ಯಮಾಪನ ಮಾಡಿ ಮಾರ್ಗದರ್ಶನ ನೀಡಿದರು. ಕೀಬೋರ್ಡ್ ನಲ್ಲಿ ಪುರುಷೋತ್ತಮ್ ಹಾಗೂ ದರ್ಶನ್, ತಬಲಾದಲ್ಲಿ ಬಾಬಣ್ಣ ಹಾಗೂ ರಿದಂ ಪ್ಯಾಡ್‌ನಲ್ಲಿ ಗುರುದತ್ತ ಅವರ ವಾದ್ಯ ಸಹಕಾರ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿತು.

ಪ್ರತಿಬಾಂಜಲಿ ಸಂಗೀತ ಅಕಾಡೆಮಿ ಅಧ್ಯಕ್ಷರು ಹಾಗೂ ಕಾರ್ಯಕ್ರಮದ ಸಂಚಲಕರಾದ ಡೇವಿಡ್ ಪ್ರತಿಬಾಂಜಲಿ ಅವರು "ಪ್ರತಿಭೆ ಯಾರೊಬ್ಬರ ಸ್ವತ್ತು ಅಲ್ಲ, ಅವಕಾಶ ಸಿಕ್ಕಾಗ ಗ್ರಾಮೀಣ ಪ್ರತಿಭೆಗಳೂ ವಿಶ್ವಮಟ್ಟದಲ್ಲಿ ಸಾಧಿಸಬಹುದು ಎಂದು ಹೇಳಿದ್ದು ಕಾರ್ಯಕ್ರಮದ ಉದ್ದೇಶವನ್ನು ಪ್ರತಿಬಿಂಬಿಸಿತು.

"ಅಭಿನವ ಸರಿಗಮಪ ಅನಂತ ಸಂಗೀತಯಾನ 2026' ಕೇವಲ ಸ್ಪರ್ಧೆಯಾಗಿ ಉಳಿಯದೆ ಮಂಡ್ಯದ ಗ್ರಾಮೀಣ ಭಾಗದ ಕಲಾವಿದರಿಗೆ ಆತ್ಮವಿಶ್ವಾಸ ತುಂಬಿದ, ಸಾಂಸ್ಕೃತಿಕ ಚಳವಳಿಯಾಗಿದೆ. ಇಂತಹ ಕಾರ್ಯಕ್ರಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರತಿಭೆಗಳನ್ನು ಹೊರತಂದು ಮಂಡ್ಯ ಜಿಲ್ಲೆಯನ್ನು ಸಂಗೀತ ಕ್ಷೇತ್ರದಲ್ಲಿ ಹೊಸ ಎತ್ತರಕ್ಕೆ ಕೊಂಡೊಯ್ಯುವ ನಂಬಿಕೆ ಮೂಡಿಸಿದೆ. ಕಾರ್ಯಕ್ರಮದಲ್ಲಿ ಸಹಸಂಯೋಜಕ ಗೌತಮ್, ಅಭಿನವ ಭಾರತಿ ವಿದ್ಯಾ ಸಂಸ್ಥೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಹಾಗೂ ಹಲವು ಗಣ್ಯರು ಉಪಸ್ಥಿತರಿದ್ದು ಕಾರ್ಯಕ್ರಮ ಯಶ್ವಿಸಿಗೊಳಿಸಿದರು. ★

# ನಾರದರ ಸಂಸಾರ



ತ್ರಿಲೋಕ ಸಂಚಾರಿಯಾದ ನಾರದರು ಒಮ್ಮೆ ಶ್ರೀ ಕೃಷ್ಣನ ಹತ್ತಿರ ಮಾಯೆ ಮಾಯೆ ಎಂದು ನೀನು ಹೇಳ್ತೀಯ . ಸಾಧು ಸಂತರ ಬಾಯಲ್ಲೂ ಹೇಳೀಸ್ತೀಯ. ಮಾಯೆ ಅಂದರೇನು? ಎಂದು ಪ್ರಶ್ನಿಸಿದರು. ಕ್ಷಣಹೊತ್ತು ಯೋಚಿಸಿದ ಭಗವಂತ ಇದನ್ನು ಪ್ರಾಯೋಗಿಕವಗಿಯೇ ನಾರದನಿಗೆ ತಿಳಿಸಿಕೊಡಬೇಕು. ಇಲ್ಲವಾದರೆ ಅರ್ಥವಾಗದು ಎಂದುಕೊಂಡು ನನ್ನ ಜೊತೆ ಬನ್ನಿ ಎಂದು ಅವರನ್ನು ಕರೆದುಕೊಂಡು ಯಮುನಾತೀರಕ್ಕೆ ಬಂದ. ಯಮುನಾ ನದಿ ತೀರದ ಕಾಡಿನಲ್ಲಿ ಅಲೆದಾಡುತ್ತ ಶ್ರೀಕೃಷ್ಣ ನಾರದರ ಬಳಿ ತುಂಬ ನೀರಡಿಕೆಯಾಗಿದೆ. ಅನತಿ ದೂರದಲ್ಲಿ ಗುಡಿಸಲೊಂದು ಕಾಣುತ್ತಿದೆ. ಕುಡಿಯಲು ನೀರು ತನ್ನಿ' ಎಂದು ಹೇಳಿದ.

ನಾರದರು ನೀರು ತರಲು ಬೇಗಬೇಗ ಆಗುಡಿಸಿಲಿನ ಹತ್ತಿರ ಹೋಗಿ ಯಾರಿದ್ದೀರಿ ಒಳಗೆ ಎಂದು ಕರೆದರು. ಕರೆದ ಧ್ವನಿ ಕೇಳಿ ಹುಣ್ಣಿಮೆಯ ಚಂದ್ರನೇ ಮೂಡಿಬಂತೋ ಎಂಬಂತೆ ಗುಡಿಸಿಲಿನ ಬಾಗಿಲು ತೆರೆದು ಕಣ್ಣು ಕೋರೈಸುವ ಸೌಂದರ್ಯವತಿಯೂ ತುಂಬುಜವ್ವನೆಯೂ ಆದ ಬೆಸ್ತರ ಕನ್ಯೆಯೋರ್ವಳು ಹೊರಬಂದಳು. ಕಡೆಗಣ್ಣ ನೋಟ ಬೀರಿ 'ಏನು ಬೇಕಾಗಿತ್ತು? ಎಂದು ಕೇಳಿದಳು. ಅವಳ ಸೌಂದರ್ಯಕ್ಕೆ ಬೆರಗಾದ ನಾರದರು ಅವಳ ಕಣ್ಣಿನಲ್ಲೇ ಕಣ್ಣಿಟ್ಟು ನೋಡುತ್ತ 'ನೀರು ಬೇಕಾಗಿತ್ತು' ಎಂದು ಹೇಳುವುದನ್ನೇ ಮರೆತು 'ನೀನು ಬೇಕಾಗಿತ್ತು' ಎಂದು ಹೇಳೀದರು.

ಅವಳು ನಸುನಾಚಿ, ನಸುನಗುತ್ತ 'ಬನ್ನಿ' ಎಂದು ಅವರನ್ನು ಒಳಗೆ ಕರೆದೊಯ್ದಳು ಮನೆಯಲ್ಲಿ ಅವಳೊಬ್ಬಳೇ ಇದ್ದಳು. ಅಪ್ಪ-ಅಮ್ಮ ಯಾತ್ರೆಗೆ ಹೋಗಿದ್ದರು. ಒಳಗೆ ಕರೆದೊಯ್ದು ಆಕೆ ಸುಂದರವಾಗಿ ಕಸೂತಿ ಹಾಕಿದ ತಲ್ಪ ಇರುವ ಪಲ್ಲಂಗದ ಮೇಲೆ ಅವರನ್ನು ಕರೆದು ಕೂರಿಸಿದಳು. ಹಣ್ಣೂ- ಹಂಪಲು ಇತ್ತು ಉಪಚರಿಸಿದಳು. ಆನಂತರ ನಾರದರು ಅವಳನ್ನು ಅವಳನ್ನು ಅಗಲಿ ಹೋಗಲಾರದೆ ಗಾಂಧರ್ವವಿಧಿಯಿಂತೆ ಅವಳನ್ನು ಮದುವೆಯಾಗಿ ಅಲ್ಲಿಯೇ ಉಳಿದುಬಿಟ್ಟರು. ಮೋಹಪರವಶರಾದ ನಾರದರು ಕೃಷ್ಣನನ್ನೂ ತನು ಬಂದ ಕರ್ಯವನ್ನೂ ಮರೆತುಬಿಟ್ಟರು. ಹೀಗೆ ನಾಲ್ಕಾರು ವರ್ಷಗಳೇ ಕಳೆದುಹೋದವು. ಎರಡು ಹೆಣ್ಣು ಮತ್ತು ಎರಡು ಗಂಡು ಮಕ್ಕಳು ಕೂಡ ಅವಳಲ್ಲಿ ಜನಿಸಿದರು. ದೇವರ್ಷಿ ನಾರದರು ಸಂಸಾರಿಯಾದರು.

ಮಳೆಗಾಲದ ಅದೊಂದು ದಿನ ಯಮುನೆಯಲ್ಲಿ ಮಹಾನೆಗಸು ಬಂತು. ನೋಡ ನೋಡುವಷ್ಟರಲ್ಲಿ ನಾರದರ ಪತ್ನಿ, ನಾಲ್ವರು ಮಕ್ಕಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರು. 'ಕಾಪಾಡಿ ಕಾಪಾಡಿ' ಎಂದು ಕೂಗುತ್ತಾ ತೇಲಿ ಹೋಗುತ್ತಿರುವ ಹೆಂಡತಿ ಮಕ್ಕಳು ಹೋಗಿಬಿಟ್ಟರು ಎಂದು ಅಳುತ್ತ ಮೇಲೆ ನೋಡುತ್ತಾರೆ. ಶಂಖ ಚಕ್ರ ಗದಾ ಪದ್ಮಧಾರಿಯಾದ ಸಾಕ್ಷಾತ್ ಶ್ರೀಕೃಷ್ಣ ಮುಗುಳ್ನಗುತ್ತ ನಿಂತಿದ್ದಾನೆ. ಮರದ ಬುಡವೆಂದು ಹಿಡಿದದ್ದು ಶ್ರೀಕೃಷ್ಣನನ ಪಾದವೇ ಆಗಿತ್ತು.

ಶ್ರೀಕೃಷ್ಣ ಹೇಳೀದ 'ನಾರದರೆ, ನನಗೆ ನೀರು ತರಲು ಬಂದ ನೀವು ಎಲ್ಲಿ ಹೋದಿರಿ' ಸುಂದರ ಸಂಸಾರದಲ್ಲಿ ಮುಳುಗಿ ಸ್ವರ್ಗಸುಖದಲ್ಲಿ ತೇಲಿದಿರಿ. ಈಗ ನನ್ನನ್ನು ನೆನೆದಿರಿ. ಮಾಯೆಯೆಂದರೆ ಇದೇ ಆಗಿದೆ. ಯಾಕೆ ಅಳುತ್ತೀರಿ? ಇದೊಂದು ಕನಸು ಎಂದು ತಿಳಿಯಿರಿ. ಅಲ್ಲದೆ ಮಾಯೆಯೆಂದರೆ ಏನು ಎಂಬ ನಿಮ್ಮ ಪ್ರಶ್ನೆಗೆ ಉತ್ತರ ಸಿಕ್ಕಿತು ಎಂದು ಭಾವಿಸುತ್ತೇನೆ. ನಿಮ್ಮ ತಂಬೂರಿ ಅದೋ ಅಲ್ಲಿದೆ ಎಂದು ಹೇಳಿ ಅಂತರ್ಧಾನ ಹೊಂದಿದ. ಯಮುನೆಯ ನೆಗಸು ಆಗಲೇ ಇಳಿದಿತ್ತು. ನರದರ ಮೋಹದ ಮುಸುಕೂ ಕಳೆದಿತ್ತು. ಮರದ ಕೊಂಬೆಯ ಮೇಲೆ ಅವರ ತಂಬೂರಿ ಜೋತಾಡುತ್ತಿತ್ತು. ಇದೆಲ್ಲ ಶ್ರೀಕೃಷ್ಣನ ತಂತ್ರನಾಟಕವೇ ಎಂದುಕೊಳ್ಳುತ್ತ ಮೆಲ್ಲನೆ ಅದನ್ನು ಎತ್ತಿಕೊಂಡ ನಾರದರು ಭಗವಂತನ ನಮಸ್ಮರಣೆ ಮಾಡುತ್ತ ಮತ್ತೆ ತ್ರಿಲೋಕ ಸಂಚಾರ ಹೊರಟರು.

ಸಂಗ್ರಹ





ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆ, ಹೊಳಲು






ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆ, ಹಳೆಬೂದನೂರು





ಶ್ರೀ ವೆಂಕಟೇಶ್ವರ
ವಿದ್ಯಾನಿಕೇತನ ಪ್ರೌಢಶಾಲೆ,
ಮೂಡಲದೊಡ್ಡಿ




ಘಟಿಕೋತ್ಸವ ಸಮಾರಂಭ, ಅಭಿನವ ಭಾರತಿ ವಿದ್ಯಾ ಕೇಂದ್ರ ಪ್ರೌಢಶಾಲೆ (ಆಂಗ್ಲಮಾಧ್ಯಮ), ಮಂಡ್ಯ







2025–26 ನೇ ಸಾಲಿನ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ
ಮತ್ತು ರಾಷ್ಟ್ರೀಯ ಮಟ್ಟದ ಲಾನ್ ಟೆನಿಸ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ,
ಅಭಿನವ ಭಾರತಿ ವಿದ್ಯಾ ಕೇಂದ್ರ ಪ್ರೌಢಶಾಲೆ (ಆಂಗ್ಲಮಾಧ್ಯಮ), ಮಂಡ್ಯ



ಅಭಿನವ ಸರಿಗಮಪ ಅನಂತ ಸಂಗೀತಯಾನ – 2026